
# ಆರಂಭಿಕ ಬಾಲ್ಯ ಶಿಕ್ಷಣದ ವೃತ್ತಿಪರ ಬೆಳವಣಿಗೆ:
# ತರಬೇತಿ ಮತ್ತು ತಾಂತ್ರಿಕ ನೆರವಿನ ಪದಕೋಶ



A joint project of National Association for the Education of Young Children (NAEYC) and National Association of Child Care Resource & Referral Agencies (NACCRRA)




ಮಕ್ಕಳಿಗೆ ಮತ್ತು ಕುಟುಂಬಗಳಿಗೆ ಉನ್ನತ ಗುಣಮಟ್ಟದ ಸೇವೆಗಳನ್ನು ಒದಗಿಸುವುದಕ್ಕೆ ಆರಂಭಿಕ ಬಾಲ್ಯ ಶಿಕ್ಷಣ ಒದಗಿಸುತ್ತಿರುವ ಕಾರ್ಯಪಡೆಗೆ **ವೃತ್ತಿಪರ ಪೂರ್ವಸಿದ್ಧತೆ ಮತ್ತು ನಿರಂತರ ವೃತ್ತಿಪರ ಬೆಳವಣಿಗೆ** (PD (ಪಿ.ಡಿ)),

ಅತ್ಯಗತ್ಯ. ವೃತ್ತಿಪರ ಬೆಳವಣಿಗೆಯ ವಿಧಾನಗಳು, ಪಾತ್ರಗಳು, ಜ್ಞಾನ, ಮತ್ತು ಸಾಮರ್ಥ್ಯಗಳಿಗೆ ಸಂಬಂಧಿಸಿದ ಸಮಂಜಸ ಪರಿಭಾಷೆ ಮತ್ತು ವ್ಯಾಖ್ಯಾನಗಳು, ಆರಂಭಿಕ ಶಿಕ್ಷಣ ಕ್ಷೇತ್ರದ ಒಂದು ನಿರ್ಣಾಯಕ ವಿಚಾರವಾಗಿ ಹೊರಹೊಮ್ಮಿದೆ. ಇತ್ತೀಚೆಗೆ, ರಾಜ್ಯಗಳು ತರಬೇತಿ ಮತ್ತು ತಾಂತ್ರಿಕ ನೆರವಿಗೆ (TA (ಟಿ.ಎ)) ಸಂಬಂಧಿಸಿದಂತೆ ಆರಂಭಿಕ ಬಾಲ್ಯ ಶಿಕ್ಷಣ ವ್ಯವಸ್ಥೆಯಲ್ಲಿ ಹೊಸ ಸವಾಲುಗಳನ್ನು ಎದುರಿಸಿವೆ ಹಾಗೂ ಅಗತ್ಯತೆಗಳನ್ನು ಮನಗಂಡಿವೆ. ಮುಖ್ಯವಾಗಿ ಗುಣಮಟ್ಟದ ಮೌಲ್ಯನಿರ್ಣಯ ಹಾಗೂ ಸುಧಾರಣಾ ವ್ಯವಸ್ಥೆಗಳು (QRIS(ಕ್ಯೂ.ಆರ್.ಐ.ಎಸ್)- quality rating and improvement systems)) ಸೇರಿದಂತೆ ಗುಣಮಟ್ಟ ಸುಧಾರಣೆಯ ಚಟುವಟಿಕೆಗಳ ಮೇಲೆ ವಿಶೇಷವಾಗಿ ರಾಜ್ಯಗಳು ತಮ್ಮ ಗಮನವನ್ನು ಹೆಚ್ಚಿಸಿ ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವ ಕಾರಣ ಈ ವಿಚಾರಗಳಿಗೆ ಸ್ಪಂದಿಸುವ ತುರ್ತು ಅಗತ್ಯತೆಯು ಹೆಚ್ಚುತ್ತಿದೆ. ಉದಾಹರಣೆಗೆ, QRIS ನಲ್ಲಿ ಯಶಸ್ವಿಯಾಗಿ ಪಾಲ್ಗೊಳ್ಳುವುದನ್ನು ಬೆಂಬಲಿಸಲು ಬೇಕಿರುವ ತರಬೇತಿ ಮತ್ತು TA ಅನ್ನು ವ್ಯಾಖ್ಯಾನಿಸಲು, ಹಾಗೂ ಅದು ಹೇಗೆ PD ಯ ಚಟುವಟಿಕೆಗಳು ಮತ್ತು ವ್ಯವಸ್ಥೆಗಳೊಂದಿಗೆ ಸಂಯೋಜನೆಗೊಳ್ಳುತ್ತದೆ; ಯಾರು ಮತ್ತು ಹೇಗೆ ತರಬೇತಿ ಮತ್ತು TA ಅನ್ನು ನೀಡಬಹುದು ಎಂಬುದನ್ನು ಹೇಗೆ ನಿರ್ಧರಿಸುವುದು; ಒಬ್ಬ ವ್ಯಕ್ತಿಯ ವೃತ್ತಿಪರ ಬೆಳವಣಿಗೆಯ ಭಾಗವಾಗಿ TA ಅನ್ನು ಹೇಗೆ ಗುರುತಿಸಬಹುದು ಮತ್ತು ಪರಿಗಣಿಸುವುದು ಎಂಬಂತಹ ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ರಾಜ್ಯಗಳು ಕಾರ್ಯನಿರತವಾಗಿವೆ.

ಸಂಬಂಧಿತ ಪ್ರಯತ್ನಗಳನ್ನು ಬೆಂಬಲಿಸಲು, National Association for the Education of Young Children (ನ್ಯಾಷನಲ್ ಅಸೋಸಿಯೇಷನ್ ಫಾರ್ ದಿ ಎಜುಕೇಶನ್ ಆಫ್ ಯಂಗ್ ಚಿಲ್ಡ್ರನ್) (NAEYC) ಎನ್.ಎ.ಇ.ವೈ.ಸಿ)) ಮತ್ತು National Association of Child Care Resource and Referral Agencies (ನ್ಯಾಷನಲ್ ಅಸೋಸಿಯೇಷನ್ ಆಫ್ ಚೈಲ್ಡ್ ಕೇರ್ ರಿಸೋರ್ಸ್ ಅಂಡ್ ರೆಫರಲ್ ಏಜೆನ್ಸೀಸ್) (NACCRRA (ಎನ್.ಎ.ಸಿ.ಸಿ.ಆರ್.ಆರ್.ಎ) ಜಂಟಿಯಾಗಿ ವೃತ್ತಿಪರ ಬೆಳವಣಿಗೆ, ತರಬೇತಿ, ಮತ್ತು ತಾಂತ್ರಿಕ ನೆರವಿನ (TA) ಪರಿಭಾಷೆಗಳ ಪದಕೋಶವನ್ನು ಅಭಿವೃದ್ಧಿಪಡಿಸಿವೆ. ಅಲ್ಲದೆ, ಈ ತರಬೇತಿ ಮತ್ತು TA ಪದಕೋಶದ ಸಹಸಂಪುಟವಾಗಿ, NAEYC ಮತ್ತು Alliance of Early Childhood Teacher Educators (ಅಲೈಯನ್ಸ್ ಆಫ್ ಅರ್ಲಿ ಚೈಲ್ಡ್ ಹುಡ್ ಟೀಚರ್ ಎಜುಕೇಟರ್ಸ್ (National Association of Early Childhood Teacher Educators (ನ್ಯಾಷನಲ್ ಅಸೋಸಿಯೇಷನ್ ಆಫ್ ಅರ್ಲಿ ಚೈಲ್ಡ್ ಹುಡ್ ಟೀಚರ್ ಎಜುಕೇಟರ್ಸ್) ಮತ್ತು ACCESS (ಎ.ಸಿ.ಸಿ.ಇ.ಎಸ್.ಎಸ್) - Associate Degree Early Childhood Teacher Educators (ಅಸೋಸಿಯೇಟ್ ಡಿಗ್ರಿ ಅರ್ಲಿ ಚೈಲ್ಡ್ ಹುಡ್ ಟೀಚರ್ ಎಜುಕೇಟರ್ಸ್) ರ ಒಂದು ಸಹಯೋಗದ ಪ್ರಯತ್ನ), ರಾಷ್ಟ್ರೀಯ ಶಿಕ್ಷಣಕ್ಕೆ ಸಂಬಂಧಿಸಿದ ವ್ಯಾಖ್ಯಾನಗಳನ್ನು ಶೋಧಿಸಿ ಅಭಿವೃದ್ಧಿಪಡಿಸುವ ಕೆಲಸವನ್ನು ಮುಂದುವರಿಸಲಿವೆ.[1]

ಈ ಪದಕೋಶವು ಜಾಗತಿಕ ವ್ಯಾಖ್ಯಾನಗಳನ್ನು ಒಳಗೊಂಡಿದ್ದು, ಅದು ತರಬೇತಿ ಮತ್ತು TA ಗೆ NAEYC ಮತ್ತು NACCRRA ಅತ್ಯುತ್ತಮದ್ದು ಎಂದು ನಂಬುವ ಪ್ರಸ್ತುತ ಅತ್ಯುತ್ತಮ ಕಾರ್ಯರೀತಿಗಳನ್ನು ವ್ಯಾಖ್ಯಾನಿಸುವುದನ್ನು ಒಳಗೊಂಡಿದೆ. ವೃತ್ತಿಪರ ಬೆಳವಣಿಗೆಯ ತರಬೇತಿ ಒದಗಿಸುವವರು, ನೀತಿ ನಿರೂಪಕರು, ಆರಂಭಿಕ ಶಿಕ್ಷಣದ ಪ್ರತಿಪಾದಕರು, ಮತ್ತು ಒಂದು ಸಮಗ್ರ ವ್ಯವಸ್ಥೆಯಾಗಿ PD ಚಟುವಟಿಕೆಗಳು ಮತ್ತು ಉಪಕ್ರಮಗಳ ನಡುವೆ ಸಂಬಂಧ ಕಲ್ಪಿಸಲು ಪ್ರಯತ್ನಿಸುತ್ತಿರುವಂತಹ ಕಾರ್ಯಕ್ರಮ ನಿರ್ವಾಹಕರಿಗೆ ಈ ವ್ಯಾಖ್ಯಾನಗಳನ್ನು ರೂಪಸಿಲಾಯಿತು. ಪಾತ್ರಗಳು ಮತ್ತು ನೀತಿಗಳನ್ನು ಸ್ಪಷ್ಟಪಡಿಸಿಕೊಳ್ಳಲು, PD ಒದಗಿಸುವವರ

ಜ್ಞಾನ ಮತ್ತು ಸಾಮರ್ಥ್ಯಗಳನ್ನು ನಿರ್ಧರಿಸುವ ಮತ್ತು ಬೆಂಬಲಿಸುವ ಸಂಬಂಧಿತ ಕಾರ್ಯಕ್ಕೆ ನೆರವಾಗುವುದಲ್ಲದೆ ಎಲ್ಲಾ ವಿಧದ PD ಗಳನ್ನು ಪರಿಗಣಿಸುವ ಮತ್ತು ಗುರುತಿಸುವ ದತ್ತಾಂಶ ಸಂಗ್ರಹಣೆಯ ಪ್ರಯತ್ನಗಳಿಗೂ ಸಹ ನೆರವಾಗುವ ವಿಷಯಗಳಿಗೆ ಸಂಬಂಧಿಸಿದಂತೆ ಈ ವ್ಯಾಖ್ಯಾನಗಳು ರಾಜ್ಯಗಳಿಗೆ ತಮ್ಮ ನಿರ್ದಿಷ್ಟ ವ್ಯವಸ್ಥೆ (ಗಳ) ಅಗತ್ಯತೆಗಳನ್ನು ಪೂರೈಸಲು ಬೇಕಾದಂತೆ ಸರಿಹೊಂದಿಸಿಕೊಳ್ಳಲು ಮತ್ತು ಹೊಂದಾಣಿಕೆ ಮಾಡಿಕೊಳ್ಳಲು ಮಾರ್ಗದರ್ಶನ ಒದಗಿಸುವುದು ಎಂದು NAEYC ಮತ್ತು NACCRRA ನಂಬಿವೆ. ಈ ಉನ್ನತ ಮಟ್ಟದ ವ್ಯಾಖ್ಯಾನಗಳ ದಾಖಲೆಯಲ್ಲಿ ಒಳಗೊಂಡಿರುವ ಪ್ರತಿ ಕಾರ್ಯತಂತ್ರಕ್ಕೆ ಸಂಬಂಧಿಸಿದಂತೆ ಅನೇಕ ಹಾಗೂ ವಿವಿಧ ಮಾದರಿಗಳು ಮತ್ತು ವಿಧಾನಗಳು ಲಭ್ಯವಿದೆ ಎಂದು ತಿಳಿದಿರುವುದರಿಂದ, ಈ ವ್ಯಾಖ್ಯಾನಗಳು ಸಂಶೋಧನೆ ಮತ್ತು ರಾಷ್ಟ್ರೀಯ ಅಥವಾ ಭಿನ್ನ ರಾಜ್ಯಗಳ ನಡುವೆ ಚರ್ಚೆಗಳಿಗೆ ಸಾಮಾನ್ಯ ತಿಳುವಳಿಕೆಗಳು, ಅಥವಾ ಆರಂಭಿಕ ಅಂಶಗಳನ್ನು ಒದಗಿಸಲು ಸಹ ನೆರವಾಗುವುದು ಎಂದು ನಾವು ನಂಬಿದ್ದೇವೆ.

ಒಂದು ದತ್ತ ಸಂದರ್ಭದಲ್ಲಿ PD ತಲುಪಿಸುವಿಕೆಯ ಒಂದು ವಿಧಾನವು ಸಾಮಾನ್ಯವಾಗಿ ಪ್ರಧಾನವಾಗಿರುತ್ತದೆಯಾದರೂ, ಈ ಕಾರ್ಯತಂತ್ರಗಳು ಆಗಾಗ್ಗೆ ಅತಿವ್ಯಾಪಿಸುತ್ತವೆ. ವಾಸ್ತವದಲ್ಲಿ, ವೃತ್ತಿಪರ ಬೆಳವಣಿಗೆಯ ತಲುಪಿಸುವಿಕೆಯಲ್ಲಿನ ಉತ್ತಮ ಕಾರ್ಯರೀತಿಗಳು ವಿವಿಧ ವಿಧಾನಗಳ ಬಳಕೆಯನ್ನು ಒಳಗೊಂಡಿವೆ. ಆದಾಗ್ಯೂ, ತರಬೇತಿ ಮತ್ತು TA ವಿಧಾನಗಳನ್ನು ಪ್ರತ್ಯೇಕವಾದ ಪ್ರಕ್ರಿಯೆಗಳಾಗಿ ಈ ಪದಕೋಶದಲ್ಲಿ ವ್ಯಾಖ್ಯಾನಿಸಲಾಗಿದೆ. ಈ ಪದಕೋಶವು, PD ಸನ್ನಿವೇಶದ ವಿಶಾಲವಾದ ಸ್ಥೂಲನೋಟ ಒದಗಿಸುವ ವ್ಯಾಖ್ಯಾನಗಳೊಂದಿಗೆ ಪ್ರಾರಂಭಗೊಳ್ಳುತ್ತದೆ. ನಂತರ ಈ ಸಂಪನ್ಮೂಲವು ತರಬೇತಿ ಮತ್ತು TA ಯ ನಿರ್ದಿಷ್ಟ PD ವಿಧಾನಗಳನ್ನು ವ್ಯಾಖ್ಯಾನಿಸುತ್ತದೆ. ಇವುಗಳಲ್ಲಿ ಮಾರ್ಗದರ್ಶನ, ಸಿದ್ಧಗೊಳಿಸುವಿಕೆ, ಸಮಾಲೋಚನೆ, ಸಲಹೆ ನೀಡುವುದು ಮತ್ತು ಸಹೋದ್ಯೋಗಿಗಳ ನಡುವೆ ಪರಸ್ಪರ ತಾಂತ್ರಿಕ ನೆರವಿನಂತಹ ಕಾರ್ಯತಂತ್ರಗಳನ್ನೂ ಒಳಗೊಂಡಂತೆ ತರಬೇತಿ ಮತ್ತು TA ಯ ನಿರ್ದಿಷ್ಟ PD ವಿಧಾನಗಳನ್ನು ವ್ಯಾಖ್ಯಾನಿಸುತ್ತದೆ. ಈ ಸಂಪನ್ಮೂಲದಲ್ಲಿ ಎರಡು ಅನುಬಂಧಗಳನ್ನು ಸೇರಿಸಲಾಗಿದೆ: ಅನುಬಂಧ A - ತಾಂತ್ರಿಕ ನೆರವಿನ ಕಾರ್ಯತಂತ್ರಗಳು ಮತ್ತು ಅನುಬಂಧ -B ಯೋಜನೆಯ ಸ್ಥೂಲನೋಟ ಮತ್ತು ಪ್ರಕ್ರಿಯೆ.

PD ಒದಗಿಸುವ ವ್ಯಕ್ತಿಗಳ ಕಾರ್ಯ ಸಂಬಂಧಿ ಬಿರುದುಗಳು ಅನೇಕ ಮತ್ತು ವಿವಿಧ - ಉನ್ನತ ಶಿಕ್ಷಣದ ಬೋಧನಾ ವೃತ್ತಿವರ್ಗದವರು, ತರಪೇತುಗಾರರು, ತಮ್ಮ ತರಬೇತಿ ಮತ್ತು TA ಪಾತ್ರಗಳನ್ನು ನಿರ್ವಹಿಸುವಲ್ಲಿನ ಕಾರ್ಯಕ್ರಮ ನಿರ್ವಾಹಕರು, ಪ್ರತ್ಯೇಕ ಸಮಾಲೋಚಕರು, ಮಕ್ಕಳ ಆರೈಕೆ ಸಂಪನ್ಮೂಲ ಮತ್ತು ಸಲಹಾ ತರಬೇತಿ ಮತ್ತು TA ಸಿಬ್ಬಂದಿ, ಹಾಗೂ ಇತರವು. ಈ ವೃತ್ತಿಪರರು ಎಳೆಯ ಮಕ್ಕಳು ಮತ್ತು ಅವರ ಕುಟುಂಬಗಳೊಂದಿಗೆ ತೊಡಗಿಸಿಕೊಂಡಿರುವ ಅಥವಾ ತೊಡಗಿಸಿಕೊಳ್ಳಲು ಪೂರ್ವಸಿದ್ಧತೆ ಮಾಡಿಕೊಳ್ಳುತ್ತಿರುವ ವ್ಯಕ್ತಿಗಳು ಹಾಗೂ ಆರಂಭಿಕ ಬಾಲ್ಯ ಶಿಕ್ಷಣಕ್ಕೆ ಸಂಬಂಧಿಸಿದ ತರಬೇತಿ, ಪರವಾನಗಿ, ಸಂಪನ್ಮೂಲ, ಮತ್ತು ಇತರ ಆಡಳಿತಾತ್ಮಕ ಪಾತ್ರಗಳಲ್ಲಿ ಮಕ್ಕಳ ಪರವಾಗಿ ಕಾರ್ಯ ನಿರ್ವಹಿಸುತ್ತಿರುವ ಅಥವಾ ಕಾರ್ಯ ನಿರ್ವಹಿಸಲು ಪೂರ್ವಸಿದ್ಧತೆ ಮಾಡಿಕೊಳ್ಳುತ್ತಿರುವ ವ್ಯಕ್ತಿಗಳಿಗೆ ಶಿಕ್ಷಣ, ತರಬೇತಿ ಮತ್ತು/ಅಥವಾ TA ಅನ್ನು ಒದಗಿಸುತ್ತಾರೆ.

PD ಒದಗಿಸುವವರು ಉನ್ನತ ಮಟ್ಟದ ಜ್ಞಾನ ಮತ್ತು ಕೌಶಲ್ಯಗಳನ್ನು ಹೊಂದಿರಬೇಕು ಮತ್ತು ನಿರಂತರವಾಗಿ ನಡೆಯುವ ವೃತ್ತಿಪರ ಬೆಳವಣಿಗೆಯಲ್ಲಿ ಪಾಲ್ಗೊಳ್ಳಬೇಕು ಎಂದು NAEYC, NACCRRA ಮತ್ತು Alliance of Early Childhood Teacher Educators ನಂಬುತ್ತಾರಾದರೂ, ಈ ಪದಕೋಶವು ಈ ವೃತ್ತಿಪರರಿಂದ ನಿರೀಕ್ಷಿಸುವ ಮೂಲ ಜ್ಞಾನ ಮತ್ತು ಸಾಮರ್ಥ್ಯಗಳನ್ನು ವ್ಯಾಖ್ಯಾನಿಸುವುದಿಲ್ಲ. ಭವಿಷ್ಯದಲ್ಲಿ ಕೈಗೊಳ್ಳುವ ಕೆಲಸದಲ್ಲಿ, NAEYC, NACCRRA ಮತ್ತು Alliance of Early Childhood Teacher Educators ವತಿಯಿಂದ

## ಸಂದರ್ಭೋಚಿತ ವ್ಯಾಖ್ಯಾನಗಳು

**ಆರಂಭಿಕ ಬಾಲ್ಯ ಶಿಕ್ಷಣದ ಕಾರ್ಯಪಡೆಯು,** ಮಕ್ಕಳ ಬೆಳವಣಿಗೆ ಮತ್ತು ಕಲಿಕೆಯನ್ನು ಬೆಂಬಲಿಸುವುದನ್ನು ಮೂಲ ಗುರಿಯಾಗಿ ಹೊಂದಿರುವುದರೊಂದಿಗೆ ಎಳೆಯ ಮಕ್ಕಳು (ಕೇಂದ್ರ, ಮನೆ ಮತ್ತು ಶಾಲೆಗಳಲ್ಲಿನ ಶಿಶುಗಳು, ಅಂಬೆಗಾಲಿಡುವವರು, ಶಾಲಾಪೂರ್ವದ ಮಕ್ಕಳು, ಮತ್ತು ಶಾಲಾ ವಯಸ್ಸಿನ ಮಕ್ಕಳು) ಮತ್ತು ಅವರ ಕುಟುಂಬಗಳು ಅಥವಾ ಅವರ ಪರವಾಗಿ (ಸೇವಾಸಂಸ್ಥೆಗಳು, ಸಂಸ್ಥೆಗಳು, ಉನ್ನತ ಶಿಕ್ಷಣ ಸಂಸ್ಥೆಗಳು, ಇತ್ಯಾದಿಗಳಲ್ಲಿ) ತೊಡಗಿಸಿಕೊಂಡಿರುವ ವ್ಯಕ್ತಿಗಳನ್ನು ಒಳಗೊಂಡಿದೆ.

**ಆರಂಭಿಕ ಬಾಲ್ಯ ಶಿಕ್ಷಣದ ವೃತ್ತಿಪರ ಬೆಳವಣಿಗೆಯು**, ವ್ಯಕ್ತಿಗಳನ್ನು ಎಳೆಯ ಮಕ್ಕಳು ಮತ್ತು ಅವರ ಕುಟುಂಬಗಳೊಂದಿಗೆ ಮತ್ತು ಅವರ ಪರವಾಗಿ ಕೆಲಸ ಮಾಡಲು ಸನ್ನದ್ಧಗೊಳಿಸುವುದು ಮಾತ್ರವಲ್ಲದೆ, ಈ ಕೆಲಸವನ್ನು ವರ್ಧಿಸಲು ಅವರು ನಿರಂತರವಾಗಿ ಪಡೆಯುತ್ತಿರುವ ಅನುಭವಗಳಿಗೆ ಸಿದ್ಧಗೊಳಿಸಲೆಂದು ಸಹ ವಿನ್ಯಾಸಗೊಳಿಸಲಾದ ಕಲಿಕೆ ಮತ್ತು ಬೆಂಬಲಿಸುವ ಚಟುವಟಿಕೆಗಳ ಒಂದು ಅವಿಚ್ಛಿನ್ನ ಸರಣಿಯಾಗಿದೆ. ಈ ಅವಕಾಶಗಳು ಆರಂಭಿಕ ಶಿಕ್ಷಣ ವೃತ್ತಿಪರರ ಜ್ಞಾನ, ಕೌಶಲ್ಯಗಳು, ಕಾರ್ಯರೀತಿಗಳು, ಮತ್ತು ಮನೋಪ್ರವೃತ್ತಿಗಳ ಸುಧಾರಣೆಗೆ ಕಾರಣವಾಗುತ್ತವೆ. ವೃತ್ತಿಪರ ಬೆಳವಣಿಗೆಯು **ಶಿಕ್ಷಣ, ತರಬೇತಿ,** ಮತ್ತು **ತಾಂತ್ರಿಕ ನೆರವನ್ನು** ಒಳಗೊಂಡಿರುತ್ತದೆ.

ಆರಂಭಿಕ ಬಾಲ್ಯದ ಕಾರ್ಯಪಡೆಯಲ್ಲಿರುವ ಕೆಲವು ವ್ಯಕ್ತಿಗಳು ಆರಂಭಿಕ ಶಿಕ್ಷಣದಲ್ಲಿ ಪದವಿ ಶಿಕ್ಷಣವನ್ನು ಹೊಂದಿದ್ದರೆ, ಕೆಲವರು ಅಂತರ ಸಂಬಂಧಿತ ಕ್ಷೇತ್ರಗಳಲ್ಲಿ ಪದವಿಗಳನ್ನು ಹೊಂದಿದ್ದಾರೆ, ಇನ್ನು ಕೆಲವರು ಪದವಿ ಕಾರ್ಯಕ್ರಮಗಳಲ್ಲಿ ದಾಖಲಿಸಿಕೊಂಡಿದ್ದಾರೆ, ಉಳಿದವರು ಕಾಲೇಜು ಕೋರ್ಸುಗಳನ್ನು ಮಾಡುತ್ತಿದ್ದಾರೆ, ಇನ್ನುಳಿದವರು ತಾಂತ್ರಿಕ ಪ್ರೌಢ ಶಾಲೆಗಳು ಅಥವಾ ತಾಂತ್ರಿಕ ಶಾಲಾ ಕಾರ್ಯಕ್ರಮಗಳನ್ನು ಪೂರ್ಣಗೊಳಿಸಿದ್ದಾರೆ, ಒಂದಷ್ಟು ಮಂದಿಗೆ ಯಾವುದೇ ಸಂಬಂಧಿತ ಶಿಕ್ಷಣದ ಹಿನ್ನೆಲೆ ಇಲ್ಲ - ಆದರೆ ಇವರಲ್ಲಿ ಬಹುತೇಕ ಎಲ್ಲರೂ ಪ್ರತಿ ವರ್ಷವೂ ತರಬೇತಿಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಒಬ್ಬ ವ್ಯಕ್ತಿಯು ಅವರ ವೃತ್ತಿ ಜೀವನದಲ್ಲಿ ಎಲ್ಲಾ ಪ್ರಕಾರಗಳ PD ಗಳಲ್ಲಿ (ಶಿಕ್ಷಣ, ತರಬೇತಿ, ಮತ್ತು TA) ತೊಡಗಿಸಿಕೊಳ್ಳಬಹುದು. ವೃತ್ತಿಪರ ಬೆಳವಣಿಗೆಯು ಎಲ್ಲಾ ಪಾತ್ರಗಳಲ್ಲಿನ ಆರಂಭಿಕ ಬಾಲ್ಯ ವೃತ್ತಿಪರರು ಹೆಚ್ಚಿನ ಜ್ಞಾನ ಮತ್ತು ಕೌಶಲ್ಯಗಳನ್ನು ಪಡೆದುಕೊಳ್ಳಲು ಮತ್ತು ಅದಕ್ಕೆ ಪ್ರತಿಫಲ ಸಿಗುವಂತಹ ವೈವಿಧ್ಯಮಯ ವೃತ್ತಿ ಪಥಗಳಲ್ಲಿ ಪ್ರಗತಿ ಸಾಧಿಸಲು ಸಹಾಯ ಮಾಡುತ್ತದೆ.

ಎಲ್ಲಾ ವೃತ್ತಿಪರ ಬೆಳವಣಿಗೆಯು (ಶಿಕ್ಷಣ, ತರಬೇತಿ, ಮತ್ತು TA) ಈ ಕೆಳಗಿನವುಗಳನ್ನು ಒಳಗೊಂಡಿರಬೇಕು:

- ಸಾಕ್ಷ್ಯ ಆಧರಿತ ಉತ್ತಮ ಕಾರ್ಯರೀತಿಗಳನ್ನು ಬಳಸಿ ವಿನ್ಯಾಸಗೊಳಿಸಿರಬೇಕು;[2] ವಯಸ್ಕ ಕಲಿಕೆಯ ತತ್ವಗಳೊಂದಿಗೆ ಹೊಂದಿಕೆಯಾಗಬೇಕು; ಮತ್ತು ಸಂಶೋಧನೆ, ಸಿದ್ಧಾಂತ, ಮತ್ತು ಕಾರ್ಯರೀತಿಯ ನಡುವಿನ ಸಂಬಂಧಗಳನ್ನು ಉತ್ತೇಜಿಸುವಂತೆ ರಚಿತವಾಗಿರಬೇಕು.
- ಎಳೆಯ ಮಕ್ಕಳ ಸಾಮರ್ಥ್ಯಗಳು ಮತ್ತು ಅಗತ್ಯತೆಗಳ ಅವಿಚ್ಛಿನ್ನ ಸರಣಿಗೆ ಗಮನ ನೀಡಬೇಕು.
- ಪ್ರತಿ ಶಿಕ್ಷಣಾರ್ಥಿಯ ಹಿನ್ನೆಲೆ (ಸಾಂಸ್ಕೃತಿಕ, ಭಾಷಿಕ, ಮತ್ತು ಸಾಮರ್ಥ್ಯದ ಹಿನ್ನೆಲೆ ಸೇರಿದಂತೆ), ಅನುಭವಗಳು, ಮತ್ತು ಅವರ ಪಾತ್ರ ಮತ್ತು ವೃತ್ತಿಪರ ಗುರಿಯ ಪ್ರಸ್ತುತ ಸಂದರ್ಭಕ್ಕೆ ಸ್ಪಂದಿಸಬೇಕು.
- ಎಲ್ಲರಿಗೂ ಅವಕಾಶ ದೊರೆಯುವುದನ್ನು ಖಚಿತಪಡಿಸಲು ಸಂಪನ್ಮೂಲಗಳನ್ನು ಒಳಗೊಳ್ಳಬೇಕು.

**ಪ್ರತ್ಯೇಕ ವೃತ್ತಿಪರ ಬೆಳವಣಿಗೆ ಯೋಜನೆಗಳು** (IPDP (ಐ.ಪಿ.ಡಿ.ಪಿ. ಗಳು)), ಆರಂಭಿಕ ಶಿಕ್ಷಣ ವೃತ್ತಿಪರರಿಗೆ ವಿವಿಧ ವೃತ್ತಿಪರ ಬೆಳವಣಿಗೆ ಅನುಭವಗಳನ್ನು ಪರಸ್ಪರ ಹಾಗೂ ಜ್ಞಾನ ಮತ್ತು ವೃತ್ತಿಪರ ಮಾನದಂಡಗಳ ಸಾಮಾನ್ಯ ತಿರುಳಿಗೆ ಸಂಬಂಧಿಸಿಕೊಳ್ಳುವಂತೆ ಒಂದು ಚೌಕಟ್ಟನ್ನು ಒದಗಿಸುವ ದಾಖಲೆಗಳಾಗಿವೆ. ಪ್ರತ್ಯೇಕ ವೃತ್ತಿಪರ ಬೆಳವಣಿಗೆ ಯೋಜನೆಗಳು ಆರಂಭಿಕ ಬಾಲ್ಯ ವೃತ್ತಿಪರರ ಸಾಮರ್ಥ್ಯಗಳನ್ನು ಹೆಚ್ಚಿಸಲು ಮತ್ತು ವ್ಯಕ್ತಿಯು ಈ ಕ್ಷೇತ್ರದಲ್ಲಿನ ಜ್ಞಾನ ಮತ್ತು ಕಾರ್ಯರೀತಿಗಳಿಗೆ ಸಂಬಂಧಿಸಿದಂತೆ ಸಕಾಲಿಕವಾಗಿರುವುದನ್ನು ಖಚಿತಪಡಿಸಿಕೊಳ್ಳಲು ಒಂದು ಸಮಗ್ರವಾದ ವಿಧಾನವನ್ನು ರೂಪಿಸಲೆಂದು ವಿನ್ಯಾಸಗೊಳಿಸಲಾಗಿರುತ್ತದೆ. ಪ್ರತ್ಯೇಕ ವೃತ್ತಿಪರ ಬೆಳವಣಿಗೆಯ ಯೋಜನೆಗಳು ವೃತ್ತಿಪರ ಪ್ರಗತಿಯನ್ನು ಉತ್ತೇಜಿಸುತ್ತವೆ. ಅವು ಈ ಕ್ಷೇತ್ರದಲ್ಲಿ ವಿವಿಧ ಪಾತ್ರಗಳನ್ನು ವಹಿಸುವ ಅಥವಾ ಹುದ್ದೆಗಳನ್ನು ಗಳಿಸುವ ಗುರಿಯನ್ನು ಹೊಂದಿರುವವರಿಗೆ ವೃತ್ತಿ ಅವಕಾಶಗಳನ್ನು ತೆರೆಯಬಹುದು. ಪ್ರತ್ಯೇಕ ವೃತ್ತಿಪರ ಬೆಳವಣಿಗೆಯ ಯೋಜನೆಗಳು ಸ್ವತಃ ತಮ್ಮ ವೃತ್ತಿಪರ ಬೆಳವಣಿಗೆ ಮತ್ತು ವೃತ್ತಿಯ ಪಥವನ್ನು ರೂಪಿಸಿಕೊಳ್ಳಲು ಜವಾಬ್ದಾರಿ ತೆಗೆದುಕೊಳ್ಳುವಂತಹ ವ್ಯಕ್ತಿಗಳನ್ನು ಬೇಡುತ್ತದೆ ಮತ್ತು ಅವರನ್ನು ಬೆಂಬಲಿಸುತ್ತದೆ.

- ಪ್ರತ್ಯೇಕ ವೃತ್ತಿಪರ ಬೆಳವಣಿಗೆ ಯೋಜನೆಗಳನ್ನು ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ರೀತಿಯಲ್ಲಿ ಅಭಿವೃದ್ಧಿಪಡಿಸಬಹುದು:

- ❖ ಕಾರ್ಯಕ್ರಮದ ಮೌಲ್ಯಮಾಪನ ಮತ್ತು ಸುಧಾರಣೆ ಪ್ರಕ್ರಿಯೆಗಳು ಸೇರಿದಂತೆ ಆತ್ಮಾವಲೋಕನ, ಕಾರ್ಯಕ್ಷಮತೆಯ ಮೌಲ್ಯಮಾಪನ, ಮತ್ತು ಇತರ ಮಾಹಿತಿಗಳ ಮೂಲಕ ಗುರುತಿಸಲಾದ ವ್ಯಕ್ತಿಯ ಅಗತ್ಯತೆಗಳು ಮತ್ತು ಸಾಮರ್ಥ್ಯಗಳನ್ನು ಆಧರಿಸಿ, ಮೇಲ್ವಿಚಾರಕರ ಮರುಪರಿಶೀಲನೆ ಮತ್ತು ಅನುಮೋದನೆಯೊಂದಿಗೆ ಕಾರ್ಯಸ್ಥಳದ ಮಟ್ಟದಲ್ಲಿ; [3] ಮತ್ತು
- ❖ ತನ್ನದೇ ಆದ ವೃತ್ತಿ ಬೆಳವಣಿಗೆ ಮತ್ತು ವೃತ್ತಿ ಪಥವನ್ನು ಗುರುತಿಸುವುದರ ಮೇಲೆ ಗಮನ ಕೇಂದ್ರೀಕರಿಸುವುದರೊಂದಿಗೆ, ಸಲಹೆಗಾರ, ಸಮಾಲೋಚಕ, ಮಾರ್ಗದರ್ಶಕ, ಅಥವಾ ಇತರ TA ಪೂರೈಕೆದಾರರ ಮಾರ್ಗದರ್ಶನದೊಂದಿಗೆ ವೈಯಕ್ತಿಕ ಮಟ್ಟದಲ್ಲಿ.

- ವ್ಯಕ್ತಿಗಳು ತಮ್ಮ ವೃತ್ತಿಪರ ಗುರಿಗಳು ಮತ್ತು ಅಗತ್ಯತೆಗಳ ಮೇಲೆ ಗಮನ ಕೇಂದ್ರೀಕೃತವಾಗಿರಲು ನಿರಂತರವಾಗಿ ತಮ್ಮ IPDP (ಐ.ಪಿ.ಡಿ.ಪಿ) ಗಳನ್ನು ಬಳಸುತ್ತಾರೆ.
- ಅಗತ್ಯ ಬಿದ್ದಲ್ಲಿ IPDP ಗಳನ್ನು ಕನಿಷ್ಠ ವಾರ್ಷಿಕವಾಗಿ, ಅಥವಾ ವೃತ್ತಿಪರ ಗುರಿಗಳು, ಬೆಳವಣಿಗೆಯ ಅಗತ್ಯತೆಗಳು, ಅಥವಾ PD ಸಂಪನ್ಮೂಲಗಳು ಅಥವಾ ಅವಕಾಶಗಳು ಬದಲಾದಾಗ ಅದಕ್ಕನುಗುಣವಾಗಿ ಮರುಪರಿಶೀಲಿಸಲಾಗುತ್ತದೆ ಮತ್ತು ಪರಿಷ್ಕರಿಸಲಾಗುತ್ತದೆ.

  - ❖ ವ್ಯಕ್ತಿಗಳು ಸಲಹೆಗಾರ ಅಥವಾ ಇತರ TA ಪೂರೈಕೆದಾರ, ವಯಸ್ಕ ಶಿಕ್ಷಣಜ್ಞ, ಮತ್ತು/ಅಥವಾ ವ್ಯಕ್ತಿಯ ಕಾರ್ಯಸ್ಥಳದ ಆಡಳಿತದ ನಾಯಕತ್ವದಲ್ಲಿನ ಮಾರ್ಗದರ್ಶನದೊಂದಿಗೆ ತಮ್ಮ ಜ್ಞಾನ, ಕಾರ್ಯರೀತಿ, ವೃತ್ತಿಪರ ಬೆಳವಣಿಗೆಯ ಪ್ರಯತ್ನಗಳು, ಮತ್ತು ಗುರಿಗಳ ಕುರಿತು ಪರ್ಯಾಲೋಚಿಸುತ್ತಾ ತಮ್ಮ ಯೋಜನೆಗಳನ್ನು ಮರುಪರಿಶೀಲನೆ ಮಾಡುತ್ತಾರೆ.

.

ಎಲ್ಲಾ ಆರಂಭಿಕ ಬಾಲ್ಯ ಶಿಕ್ಷಣದ ವೃತ್ತಿಪರರು ತಮ್ಮ ವೃತ್ತಿಯ ಗುರಿಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಅಥವಾ ವ್ಯಕ್ತಪಡಿಸಿಕೊಳ್ಳಲು ನೆರವಾಗುವಂತೆ, ಮತ್ತು PD ಅವಕಾಶಗಳಿಗೆ ಸಂಬಂಧಿಸಿದಂತೆ ವೃತ್ತಿಯಲ್ಲಿ ಅಪೇಕ್ಷಿಸುವ ಏಳಿಗೆ ಮತ್ತು ನಿರ್ಧಾರಗಳಿಗೆ ಮಾರ್ಗದರ್ಶನ ನೀಡಲು ಮತ್ತು ಆಧಾರವಾಗಿರಲು IPDP ಗಳನ್ನು ಹೊಂದಿರಬೇಕು.

## ತರಬೇತಿಯ ವ್ಯಾಖ್ಯಾನಗಳು

**ತರಬೇತಿ** ಎಂಬುದು ಒಂದು ಸಂಶೋಧನಾ ವಿಷಯ ಕ್ಷೇತ್ರಕ್ಕೆ ನಿರ್ದಿಷ್ಟವಾಗಿ ಕುರಿತಂತೆ ಹಾಗೂ ಕೌಶಲಗಳು ಅಥವಾ ಮನೋಪ್ರವೃತ್ತಿಗಳ ಸಮುಚ್ಛಯಕ್ಕೆ ಸಂಬಂಧಿಸಿದಂತೆ ಆಗುವ ಒಂದು ಕಲಿಕಾ ಅನುಭವ, ಅಥವಾ ಅನುಭವಗಳ ಸರಣಿಯಾಗಿದ್ದು ಅದು ವಿಷಯವಸ್ತು ಹಾಗೂ ವಯಸ್ಕ ಕಲಿಕೆಯ ಜ್ಞಾನ ಹಾಗೂ ಕೌಶಲ್ಯಗಳನ್ನು ಹೊಂದಿರುವ ವೃತ್ತಿಪರರಿಂದ (ರರುಗಳಿಂದ) ತಲುಪಿಸಲಾಗುತ್ತದೆ. ತರಬೇತಿ ಅವಧಿಗಳ ಯೋಜಿತ ಅನುಕ್ರಮವೊಂದು ತರಬೇತಿ ಕಾರ್ಯಕ್ರಮವನ್ನು ನಿರೂಪಿಸುತ್ತದೆ.

**ತರಬೇತಿಯ ಹೆಚ್ಚುವರಿ ಗುಣಲಕ್ಷಣಗಳು**

**ಕೇಂದ್ರಬಿಂದು**

- ಆರಂಭಿಕ ಬಾಲ್ಯ ಶಿಕ್ಷಣದ ವೃತ್ತಿಪರರ ಜ್ಞಾನ ಮತ್ತು ಸಾಮರ್ಥ್ಯಗಳನ್ನು ಹೆಚ್ಚಿಸುವ ಅಥವಾ ವರ್ಧಿಸುವ ವೃತ್ತಿಪರ ಬೆಳವಣಿಗೆಯ ಭಾಗವೆನಿಸಿದೆ.
- ಮಾಹಿತಿಯ ಹಂಚಿಕೆ; ವಿಷಯದ ಗ್ರಹಿಕೆ; ಜ್ಞಾನ ಅಥವಾ ಕೌಶಲಗಳು, ಮತ್ತು ಸಂಬಂಧಿತ ಧೋರಣೆಗಳು ಹಾಗೂ ಮನೋಪ್ರವೃತ್ತಿಗಳ ಅನ್ವಯಿಕೆ; ವಿಷಯದ ವಿಶ್ಲೇಷಣೆ ಅಥವಾ ಸಂಶ್ಲೇಷಣೆ; ಅಥವಾ ಇವೆಲ್ಲವುಗಳ ಸಂಯೋಜನೆಯ ಮೇಲೆ ತರಬೇತಿಯ ಅವಧಿಗಳು ಮತ್ತು ಕಾರ್ಯಕ್ರಮಗಳು ಗಮನ ಕೇಂದ್ರೀಕರಿಸಬಹುದು.

**ಸಂಬಂಧಗಳು**

- ಎಲ್ಲಾ ತರಬೇತಿಗಳು ನಂಬಿಕೆಯ ಮತ್ತು ಗೌರವಯುತ ಅಂತರಕ್ರಿಯೆಗಳ ಮೂಲಕ ಬಲಗೊಳ್ಳುತ್ತದೆ. ತರಪೇತುಗಾರ ಅಧಿಕೃತ ನಾಯಕತ್ವ ಪಾತ್ರವನ್ನು ವಹಿಸುವುದರ ಜೊತೆಗೆ, ಪಾಲ್ಗೊಳ್ಳುವವರು ಪರಸ್ಪರರನ್ನು ಕಲಿಕೆಗೆ ಸಂಪನ್ಮೂಲಗಳನ್ನಾಗಿ ಗೌರವ ನೀಡುತ್ತಾರೆ.
- ತರಬೇತಿ ಕಾರ್ಯಕ್ರಮಗಳು ಅನೇಕ ಅವಧಿಗಳನ್ನು ಒಳಗೊಂಡಿರುವುದರಿಂದ, ತರಪೇತುಗಾರ(ರು) ಮತ್ತು ಪಾಲ್ಗೊಳ್ಳುವವರ ನಡುವೆ ಹಾಗೂ ಅವರಲ್ಲಿ ಉದ್ದೇಶಪೂರ್ವಕವಾಗಿ ಸಕಾರಾತ್ಮಕ ಸಂಬಂಧಗಳನ್ನು ರೂಪಿಸಿಕೊಳ್ಳುವುದರಿಂದ ಅವರು ಪ್ರಯೋಜನ ಪಡೆಯುತ್ತಾರೆ.
- ಒಬ್ಬ ವ್ಯಕ್ತಿ ಅಥವಾ ಒಂದು ಗುಂಪಿಗೆ ಓರ್ವ ವ್ಯಕ್ತಿ ಅಥವಾ ಒಂದು ತಂಡದ ಮೂಲಕ ತಲುಪಿಸಲಾಗುತ್ತದೆ.

**ಪ್ರಕ್ರಿಯೆ**

- ವೃತ್ತಿಯ ಮಾನದಂಡಗಳು ಮತ್ತು ವ್ಯಕ್ತಿ, ಗುಂಪು, ಮತ್ತು/ಅಥವಾ ವ್ಯವಸ್ಥೆಯ ಅಗತ್ಯತೆಗಳ ಮೌಲ್ಯಮಾಪನದ ಆಧಾರದ ಮೇಲೆ ಯೋಜಿತವಾಗಿರುತ್ತದೆ ಹಾಗೂ ನಡೆಸಲಾಗಿರುತ್ತದೆ. ತರಬೇತಿಯ ಅವಧಿಗೆ (ಗಳಿಗೆ) ಕಲಿಕಾ ಫಲಿತಾಂಶಗಳನ್ನು ವಿಶದೀಕರಿಸಲು ಮಾನದಂಡಗಳು, ಅಗತ್ಯತೆಗಳ ಮೌಲ್ಯಮಾಪನ, ಮತ್ತು ಇತರ ಸಾಕ್ಷ್ಯಗಳನ್ನು ಸಹ ಬಳಸಲಾಗುತ್ತದೆ.
- ಸ್ಫುಟಗೊಳಿಸಲಾದ ಫಲಿತಾಂಶಗಳನ್ನು ಬೆಂಬಲಿಸುವಂತಹ ವಿಷಯ ಬೋಧನೆಗೆ ಅಂತರಕ್ರಿಯಾತ್ಮಕ ಕಲಿಕಾ ಚಟುವಟಿಕೆಗಳು, ಅಭ್ಯಾಸಪಾಠಗಳು, ಮತ್ತು ಬೋಧನಾ ಸಹಾಯಕ ಸಾಧನಗಳು (ಕರಪತ್ರಗಳು, ದೃಶ್ಯ - ಶ್ರವ್ಯ ಸಾಧನಗಳು, ಮತ್ತು ಬೋಧನೆಯ ಇತರ ಘಟಕಗಳು) ಸೇರಿದಂತೆ ವಯಸ್ಕ ಕಲಿಕಾ ತತ್ವಗಳನ್ನು ಅನುಸರಿಸುತ್ತದೆ.
- ಪಾಲ್ಗೊಳ್ಳುವವರ ಜ್ಞಾನ ಅಥವಾ ಸಾಮರ್ಥ್ಯಗಳಲ್ಲಿ ಪರಿಣಮಿಸುವ ಹೆಚ್ಚಳ ಸೇರಿದಂತೆ ತರಬೇತಿ ಅವಧಿ/ ಕಾರ್ಯಕ್ರಮದ ಪರಿಣಾಮಕಾರಿತ್ವವನ್ನು ಅಳೆಯುವ ಮೌಲ್ಯಮಾಪನದ ಅಂಶಗಳನ್ನು ಒಳಗೊಂಡಿರುತ್ತದೆ.
- ತರಬೇತಿ ಕಾರ್ಯಕ್ರಮವನ್ನು ಪೂರ್ಣಗೊಳಿಸಿದಲ್ಲಿ ಅದು ಪಾಲ್ಗೊಳ್ಳುವವರಿಗೆ Child Development Associate (ಚೈಲ್ಡ್ ಡೆವೆಲಪ್ಮೆಂಟ್ ಅಸೋಸಿಯೇಟ್) (CDA (ಸಿ.ಡಿ.ಎ)) ರುಜುವಾತು ಪತ್ರ ಅಥವಾ ಇನ್ನೊಂದು ಪ್ರಕಾರದ ರುಜುವಾತು ಪತ್ರ, ನಿರಂತರ ಶಿಕ್ಷಣ ಘಟಕಗಳು (CEU (ಸಿ.ಇ.ಯು) - continuing education units), ಕಳೆದ ಗಂಟೆಗಳು, ಅಥವಾ ಪ್ರಮಾಣನ ನೀಡುವುದಕ್ಕಾಗಿ ಅವರನ್ನು ಮೌಲ್ಯಮಾಪನ ಮಾಡಲು ಎಡೆಮಾಡಿಕೊಡುವುದು. ಕೆಲವೊಂದು ಸಂದರ್ಭಗಳಲ್ಲಿ, ತರಬೇತಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಪಾಲ್ಗೊಂಡಿದ್ದವರಿಗೆ ಕೋರ್ಸ್ ಅವಧಿಗಳ ಪ್ರಮಾಣನ ನೀಡಲಾಗುತ್ತದೆ ಅಥವಾ ಅವರು ಕಾಲೇಜು ಸಮಾಪ್ತಿಯ ಪತ್ರ ಪಡೆಯಲು ಅರ್ಹರಾಗುತ್ತಾರೆ.

ಪಾಲ್ಗೊಳ್ಳುವವರಿಗೆ CEU ಗಳು, ಕಳೆದ ಗಂಟೆಗಳು, ಅಥವಾ ಸರ್ಕಾರದ ಪ್ರಕಾರ ಅಗತ್ಯವಿರುವ ದಸ್ತಾವೇಜನ್ನು ನೀಡುವುದರ ಸಲುವಾಗಿ ತರಪೇತುಗಾರರು ಮತ್ತು/ಅಥವಾ ಅವರ ತರಬೇತಿ ವಿಷಯವು ನಿರ್ದಿಷ್ಟ ಅನುಮೋದನೆಯ ಅಗತ್ಯತೆಗಳನ್ನು ಪೂರೈಸಬೇಕು.

- ತರಬೇತಿ ಪಡೆವಾತರ ವಿಶಾಲವಾದ ವೃತ್ತಿಪರ ಬೆಳವಣಿಗೆಯ ಯೋಜನೆಯಲ್ಲಿ ಅಂತರ್ಗತವಾಗಿರಬೇಕು.

**ಅವಧಿ**

- ಒಂದು ಸಲ ಅಥವಾ ಅವಧಿಗಳ ಸರಣಿಯಲ್ಲಿ (ತರಬೇತಿ ಕಾರ್ಯಕ್ರಮ) ಸಂಭವಿಸಬಹುದು.

**ತಲುಪಿಸುವ ವಿಧ**

- ಮುಖಾಮುಖಿ, ದೂರಶಿಕ್ಷಣ, ತಂತ್ರಜ್ಞಾನ ಆಧರಿತ, ಅಥವಾ ಮಿಶ್ರ ವಿಧಾನಗಳ ಮೂಲಕ ತಲುಪಿಸಬಹುದು.

**ಸೇವಾಪೂರ್ವ ಅಥವಾ ಆರಂಭಿಕ ತರಬೇತಿ** ಎಂದರೆ, ಒಂದು ಹುದ್ದೆಯಲ್ಲಿ ಕೆಲಸವನ್ನು ಪ್ರಾರಂಭಿಸುವ ಮೊದಲು ಒಬ್ಬ ವ್ಯಕ್ತಿಯು ತೊಡಗಿಸಿಕೊಳ್ಳುವ ಪ್ರಕ್ರಿಯೆಯಾದ PD ಅನ್ನು ಸೂಚಿಸುತ್ತದೆ. ಒಂದು ಪಾತ್ರದಲ್ಲಿ ಕಾರ್ಯನಿರ್ವಹಿಸಲು ಆರಂಭಿಕ ಬಾಲ್ಯದ ವೃತ್ತಿಪರರಿಗೆ ಸೇವಾಪೂರ್ವ ತರಬೇತಿಯು ಬೇಕಾಗಬಹುದು.

ಆರಂಭಿಕ ತರಬೇತಿಯಲ್ಲಿ ತೊಡಗಿಸಿಕೊಂಡಿರುವ ವೃತ್ತಿಪರರು, ಅಂತಹ ತರಬೇತಿಯು ಪೂರ್ಣಗೊಳ್ಳುವ ತನಕ ಓರ್ವ ಅರ್ಹ ಸಹೋದ್ಯೋಗಿಯೊಂದಿಗೆ ಅಥವಾ ಅವರ ಮೇಲ್ವಿಚಾರಣೆಯಲ್ಲಿ ಕೆಲಸ ಮಾಡಬೇಕು.

**ಸೇವಾನಿರತ ಅಥವಾ ಮುಂದುವರಿಯುತ್ತಿರುವ ತರಬೇತಿ** ಎಂದರೆ, ಅದು ತಮ್ಮ ಕೌಶಲ್ಯಗಳನ್ನು ವರ್ಧಿಸಿಕೊಳ್ಳಲು ಮತ್ತು ಈ ಕ್ಷೇತ್ರದಲ್ಲಿನ ಜ್ಞಾನ ಮತ್ತು ಕಾರ್ಯರೀತಿಗೆ ಸಂಬಂಧಿಸಿದಂತೆ ಸಕಾಲಿಕವಾಗಿರಲು ಆರಂಭಿಕ ಬಾಲ್ಯದ ವೃತ್ತಿಪರರು ತೊಡಗಿಸಿಕೊಳ್ಳುವ PD ಪ್ರಕ್ರಿಯೆ. ಒಂದು ಪಾತ್ರದಲ್ಲಿ ಕಾರ್ಯನಿರ್ವಹಿಸುವುದನ್ನು ಮುಂದುವರಿಸಲು ಆರಂಭಿಕ ಬಾಲ್ಯದ ವೃತ್ತಿಪರರಿಗೆ ಸೇವಾನಿರತ ತರಬೇತಿಯು ಬೇಕಾಗಬಹುದು.

ಈ ಕ್ಷೇತ್ರವು ವೈವಿಧ್ಯ ಅಗತ್ಯತೆಗಳನ್ನು ಬೇಡುವುದರಿಂದ, ಸೇವಾಪೂರ್ವ ಮತ್ತು ಸೇವಾನಿರತ ಶಿಕ್ಷಣ ಮತ್ತು ತರಬೇತಿಗೆ ಸಂಬಂಧಿಸಿದಂತೆ ಅನೇಕವೇಳೆ ಅತಿವ್ಯಾಪನ ಸಂಭವಿಸುತ್ತದೆ. ಒಬ್ಬ ವ್ಯಕ್ತಿಯು ಒಂದು ಸಮುದಾಯ ಆಧಾರಿತ ಸಂಸ್ಥೆಯಲ್ಲಿ ಬೋಧನಾ ಸಿಬ್ಬಂದಿ ಸದಸ್ಯರಾಗಿ ಕೆಲಸ ಮಾಡಲು ಸೇವಾಪೂರ್ವ ಶಿಕ್ಷಣ ಮತ್ತು/ಅಥವಾ ತರಬೇತಿಯನ್ನು ಪಡೆಯಬಹುದು ಹಾಗೂ ಅವರ ಉದ್ಯೋಗದ ಅವಧಿಯಲ್ಲಿ ಸೇವಾನಿರತ ಶಿಕ್ಷಣ ಮತ್ತು/ಅಥವಾ ತರಬೇತಿಯನ್ನು ಪಡೆಯಬಹುದು. ಇದೇ ವ್ಯಕ್ತಿಯು, ಪ್ರತ್ಯೇಕ ಪರವಾನಗಿ ಅಗತ್ಯವಿರುವ ವ್ಯವಸ್ಥೆಯಲ್ಲಿ (ಉದಾ: ಸಾರ್ವಜನಿಕ ಶಾಲೆಗಳು) ಶಿಕ್ಷಕರ ಪಾತ್ರಕ್ಕಾಗಿ ಪದವಿ ಶಿಕ್ಷಣವನ್ನು ಮುಂದುವರಿಸುತ್ತಿರಬಹುದು - ಈ ಶಿಕ್ಷಣವನ್ನು ವ್ಯಕ್ತಿಯ ಪ್ರಸ್ತುತ ಪಾತ್ರಕ್ಕೆ ಸೇವಾನಿರತ ವೃತ್ತಿಪರ ಬೆಳವಣಿಗೆ ಎಂದು ಹಾಗೂ ಪ್ರಮಾಣೀಕೃತ ಬೋಧನಾ ಹುದ್ದೆಗೆ ಸೇವಾಪೂರ್ವ ಸಿದ್ಧತೆ ಎಂದು ಪರಿಗಣಿಸಲಾಗುವುದು. ಆದ್ದರಿಂದ, ಸೇವಾಪೂರ್ವ ಮತ್ತು ಸೇವಾನಿರತ ಎಂಬ ಹಣೆಪಟ್ಟಿಗಳನ್ನು ಈ ಕ್ಷೇತ್ರದಲ್ಲಿ ಒಂದು ಹುದ್ದೆ ಅಥವಾ ಸ್ಥಾಪಿತ ಪಾತ್ರದ ಅಗತ್ಯತೆಗಳಿಗೆ ಸಂಬಂಧಿಸಿರುವುದಾಗಿ ನೋಡಬೇಕು.

## ತಾಂತ್ರಿಕ ನೆರವಿಗೆ ಸಂಬಂಧಿಸಿದ ವ್ಯಾಖ್ಯಾನಗಳು

**ತಾಂತ್ರಿಕ ನೆರವು** (TA) ಎಂದರೆ, ತರಬೇತಿ ಪಡೆವಾತರರ ಪ್ರಕ್ರಿಯೆಗಳು, ಜ್ಞಾನದ ಅನ್ವಯ, ಅಥವಾ ಸೇವೆಗಳ ಅನುಷ್ಠಾನವನ್ನು ಅಭಿವೃದ್ಧಿಪಡಿಸಲು ಅಥವಾ ಬಲಪಡಿಸಲು ವಿಷಯವಸ್ತು ಮತ್ತು ವಯಸ್ಕ ಕಲಿಕಾ ಜ್ಞಾನ ಮತ್ತು ಕೌಶಲ್ಯಗಳನ್ನು ಹೊಂದಿರುವ ವೃತ್ತಿಪರರಿಂದ (ರುಗಳಿಂದ) ನೀಡಲಾಗುವ ಉದ್ದಿಷ್ಟದ ಮತ್ತು ತರಬೇತಿ ಶಿಕ್ಷಾರ್ಥಿ-ವಿಶಿಷ್ಟವಾಗಿಸಿದ ಬೆಂಬಲಗಳ ಮುನ್ನೇರ್ಪಾಡು.

### ತಾಂತ್ರಿಕ ನೆರವಿನ ಹೆಚ್ಚುವರಿ ಗುಣಲಕ್ಷಣಗಳು

### ಕೇಂದ್ರಬಿಂದು

- ಶಿಕ್ಷಣ ಮತ್ತು/ಅಥವಾ ತರಬೇತಿಯ ಮೂಲಕ ಕಲಿತ ಸಿದ್ಧಾಂತಗಳು ಮತ್ತು ಪಡೆದ ಮಾಹಿತಿಗಳನ್ನು ಉತ್ತಮ ಕಾರ್ಯರೀತಿಗಳಾಗಿ ರೂಪಾಂತರಿಸಲು ವೃತ್ತಿಪರರಿಗೆ ಅಗತ್ಯವಿರುವ ಪರ್ಯಾಲೋಚಕ ಪ್ರಕ್ರಿಯೆಗಳನ್ನು ಬೆಂಬಲಿಸುತ್ತದೆ.
- **ಮಾರ್ಗದರ್ಶನ, ತರಬೇತಿ, ಸಮಾಲೋಚನೆ, PD ಗೆ ಸಲಹೆ ನೀಡುವುದು**, ಮತ್ತು ಸಹೋದ್ಯೋಗಿಗಳ **ನಡುವೆ ಪರಸ್ಪರ ತಾಂತ್ರಿಕ ನೆರವು** (ಕೆಳಗೆ ವಿಶದೀಕರಿಸಲಾಗಿದೆ) ಕಾರ್ಯತಂತ್ರಗಳಾಗಿದ್ದು ಅವು ಪ್ರತ್ಯೇಕ ಪ್ರಕ್ರಿಯೆಗಳಾಗಿರಬಹುದು ಅಥವಾ ಶಿಕ್ಷಣ ಮತ್ತು/ ಅಥವಾ ತರಬೇತಿ ಕಾರ್ಯಕ್ರಮಗಳ ಭಾಗವಾಗಿ ಬಳಸಲಾಗುವುದು.
- ತರಬೇತಿ ಪಡೆವಾತರರ ವಿಶಾಲವಾದ ವೃತ್ತಿಪರ ಬೆಳವಣಿಗೆಯ ಯೋಜನೆಯಲ್ಲಿ ಅಂತರ್ಗತವಾಗಿರಬೇಕು.

### ಸಂಬಂಧಗಳು

- ಹೆಚ್ಚಿನ TA ವಿಧಾನಗಳು ಸಂಬಂಧ-ಆಧಾರಿತದ್ದಾಗಿರುತ್ತವೆ; ಅವು ಸಕಾರಾತ್ಮಕ, ನಂಬಿಕೆಯ, ಮತ್ತು ಗೌರವಯುತ ಸಂಬಂಧಗಳನ್ನು ರೂಪಿಸಿಕೊಳ್ಳುವುದರಿಂದ ಪ್ರಯೋಜನವನ್ನು ಪಡೆಯುತ್ತವೆ.
- ಒಬ್ಬ ವ್ಯಕ್ತಿ ಅಥವಾ ಒಂದು ಗುಂಪಿಗೆ ಓರ್ವ ವ್ಯಕ್ತಿ ಅಥವಾ ಒಂದು ತಂಡದ ಮೂಲಕ ತಲುಪಿಸಲಾಗಬಹುದು.

### ಪ್ರಕ್ರಿಯೆ

- ಮಾಹಿತಿ ಮತ್ತು ಸಂಪನ್ಮೂಲಗಳ ಹಂಚಿಕೆ ಮತ್ತು ಸಲಹೆಗಳು, ಸಿದ್ಧಗೊಳಿಸುವಿಕೆ, ಮಾರ್ಗದರ್ಶನ, ಸಮಾಲೋಚನೆ, ಮತ್ತು ವೃತ್ತಿಪರ ಬೆಳವಣಿಗೆಯ ಕುರಿತ ಸಲಹೆ ನೀಡುವುದು, ಸಹೋದ್ಯೋಗಿಗಳ ನಡುವೆ

ಪರಸ್ಪರ ತಾಂತ್ರಿಕ ನೆರವು, ಹಾಗೂ ಇತರ ಬೆಂಬಲ ಸ್ವರೂಪಗಳ ಸಂಯೋಜನೆಗಳನ್ನು ಒಳಗೊಂಡಿರಬಹುದು.

**ಅವಧಿ**

- ಅಗತ್ಯತೆಗಳು, ಪ್ರತಿಕ್ರಿಯೆಗಳು, ಮತ್ತು ಸಂಪನ್ಮೂಲಗಳನ್ನು ಅವಲಂಬಿಸಿ ಮಟ್ಟಗಳು, ತೀವ್ರತೆ, ಮತ್ತು ಅವಧಿಯು ಹೆಚ್ಚು ಬದಲಾಗಬಹುದು.

**ತಲುಪಿಸುವ ವಿಧ**

- ಮುಖಾಮುಖಿ ಅಥವಾ ದೂರಶಿಕ್ಷಣ, ತಂತ್ರಜ್ಞಾನ-ಆಧರಿತ, ಅಥವಾ ಮಿಶ್ರ ವಿಧಾನಗಳ ಮೂಲಕ ಒದಗಿಸಲಾಗಬಹುದು.

**ಮಾರ್ಗದರ್ಶನ** ಎಂದರೆ ಒಂದೇ ರೀತಿಯ ವೃತ್ತಿಪರ ಪಾತ್ರಗಳನ್ನು ವಹಿಸಿರುವ ಸಹೋದ್ಯೋಗಿಗಳ ನಡುವಿನ ಸಂಬಂಧ ಆಧಾರಿತ ಪ್ರಕ್ರಿಯೆಯಾಗಿದ್ದು, ಇಲ್ಲಿ ವಯಸ್ಕ ಕಲಿಕಾ ಜ್ಞಾನ ಮತ್ತು ಕೌಶಲ್ಯಗಳ ಕುರಿತು ಹೆಚ್ಚು ಅನುಭವಸ್ಥ ವ್ಯಕ್ತಿಯಾಗಿರುವ ಮಾರ್ಗದರ್ಶಕರು ಹೆಚ್ಚು ಅನುಭವವಿರದ ಸಲಹಿದಾತ ಅಥವಾ ಶಿಕ್ಷಾರ್ಥಿಗೆ ಮಾರ್ಗದರ್ಶನ ಮತ್ತು ಮಾಹಿತಿಯನ್ನು ಒದಗಿಸುತ್ತಾರೆ. ಮಾರ್ಗದರ್ಶನವು ವ್ಯಕ್ತಿಯ ವೈಯಕ್ತಿಕ ಅಥವಾ ವೃತ್ತಿಪರ ಸಾಮರ್ಥ್ಯವನ್ನು ವೃದ್ಧಿಸುವ ಉದ್ದೇಶವನ್ನು ಹೊಂದಿದ್ದು, ಹೆಚ್ಚಿನ ವೃತ್ತಿಪರ ಪರಿಣಾಮಕಾರಿತ್ವದಲ್ಲಿ ಪರಿಣಮಿಸುತ್ತದೆ.

**ಮಾರ್ಗದರ್ಶನದ ಹೆಚ್ಚುವರಿ ಗುಣಲಕ್ಷಣಗಳು**

**ಕೇಂದ್ರಬಿಂದು**

- ನಿರ್ದಿಷ್ಟ ವಿಷಯ ಅಥವಾ ತರಬೇತಿ ಶಿಕ್ಷಾರ್ಥಿಯ ಸಮಗ್ರ ವೃತ್ತಿಪರ ಬೆಳವಣಿಗೆಗೆ ಗಮನ ನೀಡುತ್ತದೆ.
- ಶಿಕ್ಷಣ ಮತ್ತು/ಅಥವಾ ತರಬೇತಿಯ ಮೂಲಕ ಕಲಿತ ಸಿದ್ಧಾಂತಗಳು ಮತ್ತು ಪಡೆದ ಮಾಹಿತಿಗಳನ್ನು ಉತ್ತಮ ಕಾರ್ಯರೀತಿಗಳಾಗಿ ರೂಪಾಂತರಿಸಲು ವೃತ್ತಿಪರರಿಗೆ ಅಗತ್ಯವಿರುವ ಪರ್ಯಾಲೋಚಕ ಪ್ರಕ್ರಿಯೆಗಳನ್ನು ಬೆಂಬಲಿಸುತ್ತದೆ.
- ತರಬೇತಿ ಪಡೆವಾತರರ ವಿಶಾಲವಾದ ವೃತ್ತಿಪರ ಬೆಳವಣಿಗೆಯ ಯೋಜನೆಯಲ್ಲಿ ಸೇರಿಸಬೇಕು.

**ಸಂಬಂಧಗಳು**

- ಮಾರ್ಗದರ್ಶಕ ಮತ್ತು ತರಬೇತಿ ಶಿಕ್ಷಾರ್ಥಿಯು ಸಕಾರಾತ್ಮಕ, ನಂಬಿಕೆಯ, ಮತ್ತು ಗೌರವಯುತ ಸಂಬಂಧವನ್ನು ಸ್ಥಾಪಿಸುವುದನ್ನು ಹಾಗೂ ಕಾಪಾಡಿಕೊಳ್ಳುವುದನ್ನು ಒಳಗೊಂಡಿದೆ.
- ಮಾರ್ಗದರ್ಶಕ ಮತ್ತು ತರಬೇತಿ ಶಿಕ್ಷಾರ್ಥಿಯ ನಡುವಿನ ಆದರ್ಶ ಸ್ವರೂಪದ ಹೊಂದಾಣಿಕೆಯು ಗೊತ್ತುಮಾಡುವುದಕ್ಕಿಂತಲೂ ಪರಸ್ಪರ ಒಪ್ಪಿಕೊಂಡ ಸಂಬಂಧವಾಗಿರುತ್ತದೆ. ಒಬ್ಬ ವ್ಯಕ್ತಿಯು ಮಾರ್ಗದರ್ಶಕನ ಬೆಂಬಲ ಪಡೆಯಬಹುದು, ಅಥವಾ ಒಬ್ಬ ಮಾರ್ಗದರ್ಶಕನಿಗೆ ಗೊತ್ತುಮಾಡಲ್ಪಡಬಹುದು, ಅಥವಾ ಮಾರ್ಗದರ್ಶಕನು ಒಬ್ಬ ವ್ಯಕ್ತಿಗೆ ಗೊತ್ತುಮಾಡಲ್ಪಡಬಹುದು.

- ಕೆಲವು ಮೇಲ್ವಿಚಾರಕರ ಮೂಲಕ ಸಾಧಿಸಬಹುದಾದರೂ ಮೇಲ್ವಿಚಾರಣೆಯ ಪ್ರಕ್ರಿಯೆಗಳಿಂದ ಪ್ರತ್ಯೇಕಿಸಬೇಕು. ಕೆಲಸದ ಕಾರ್ಯಸಾಧನೆಯ ಮೌಲ್ಯಮಾಪನ ಮಾಡುವ ವಿಧಾನವಾಗಿ ಬಳಸಬಾರದು.

**ಪ್ರಕ್ರಿಯೆ**

- ಪಾತ್ರದ ಕುರಿತು ಸ್ಪಷ್ಟತೆ ಸ್ಥಾಪಿಸುವುದು ಮತ್ತು ಗುರಿಯನ್ನು ನಿರ್ಧರಿಸುವುದರೊಂದಿಗೆ ಪ್ರಾರಂಭಗೊಳ್ಳುತ್ತದೆ.
- ಮಾರ್ಗದರ್ಶಿತ ಆತ್ಮಾವಲೋಕನ ಮುಂತಾದಂತಹ ವಯಸ್ಕ ಕಲಿಕಾ ತಂತ್ರಗಳನ್ನು ಸುಗುಮಗೊಳಿಸುವುದನ್ನು ಒಳಗೊಂಡಿದೆ ಮತ್ತು ಅದು ತರಬೇತಿ ಶಿಕ್ಷಾರ್ಥಿಯ ವೃತ್ತಿಪರ ಕೆಲಸ ಅಥವಾ ವೈಯಕ್ತಿಕ ಮನೋಪ್ರವೃತ್ತಿಗೆ ಹೊಸ ವಿಚಾರಗಳನ್ನು ಅನ್ವಯಿಸುವುದರಲ್ಲಿ ಪರಿಣಮಿಸುತ್ತದೆ.
- ತರಬೇತಿ ಶಿಕ್ಷಾರ್ಥಿಯು ಪ್ರಶ್ನೆಗಳು ಅಥವಾ ನಿರ್ದಿಷ್ಟ ಆತಂಕಗಳನ್ನು ಹೊಂದಿದ್ದಾಗ ಮಾರ್ಗದರ್ಶಕ ಮತ್ತು ತರಬೇತಿ ಶಿಕ್ಷಾರ್ಥಿಯ ನಡುವೆ ಯೋಜಿತವಲ್ಲದ  ಒಡನಾಟಗಳನ್ನು ಒಳಗೊಂಡಿರಬಹುದು.
- ನಿರಂತರವಾಗಿ ಮುಂದುವರಿಯುವುದು ಅಥವಾ ಪರಸ್ಪರ ಒಪ್ಪಿಗೆಯ ಮೇರೆಗೆ ಅಥವಾ ತರಬೇತಿ ಶಿಕ್ಷಾರ್ಥಿಯು ತನ್ನ ಗುರಿಗಳನ್ನು ಸಾಧಿಸಿದಾಗ ಕೊನೆಗೊಳ್ಳುತ್ತದೆ.

**ಅವಧಿ**

- ನಿರಂತರ, ಪುನರುಕ್ತಿ ರೂಪದ ಪ್ರಕ್ರಿಯೆ.

**ತಲುಪಿಸುವ ವಿಧ**

- ಮುಖಾಮುಖಿ ಅಥವಾ ದೂರಶಿಕ್ಷಣ, ತಂತ್ರಜ್ಞಾನ ಆಧರಿತ,  ಅಥವಾ  ಮಿಶ್ರ ವಿಧಾನಗಳ ಮೂಲಕ ಒದಗಿಸಲಾಗಬಹುದು.

*********

**ಸಿದ್ಧಗೊಳಿಸುವಿಕೆಯ** ತರಬೇತಿ ಎನ್ನುವುದು ಸಂಬಂಧ ಆಧಾರಿತ ಪ್ರಕ್ರಿಯೆಯಾಗಿದ್ದು, ಇದನ್ನು ವಿಶೇಷಜ್ಞನದ ಮತ್ತು ವಯಸ್ಕ ಕಲಿಕಾ ಜ್ಞಾನ ಮತ್ತು ಕೌಶಲ್ಯಗಳನ್ನು ಹೊಂದಿರುವ ತಜ್ಞರಿಂದ ಮುನ್ನಡೆಸಲಾಗುತ್ತದೆ ಹಾಗೂ ಸಾಮಾನ್ಯವಾಗಿ ತರಬೇತಿ ಪಡೆವಾತರುಗಿಂತಲೂ (ಗಳಿಗಿಂತಲೂ) ಭಿನ್ನವಾದ ವೃತ್ತಿಪರ ಪಾತ್ರವನ್ನು ವಹಿಸಿ ಕಾರ್ಯನಿರ್ವಹಿಸುತ್ತಾರೆ. ನಿರ್ದಿಷ್ಟ ವೃತ್ತಿಪರ ಮನೋಪ್ರವೃತ್ತಿ, ಕೌಶಲ್ಯಗಳು, ಮತ್ತು ವರ್ತನೆಯನ್ನು ಹೊಂದುವಂತೆ ಸಮರ್ಥರನ್ನಾಗಿಸಲು ಸಿದ್ಧಗೊಳಿಸುವ  ತರಬೇತಿಯನ್ನು ವಿನ್ಯಾಸಗೊಳಿಸಲಾಗುತ್ತದೆ, ಹಾಗೂ ಇದು ಒಬ್ಬ ವ್ಯಕ್ತಿ ಅಥವಾ ಗುಂಪಿನ ಗುರಿ ನಿರ್ಧಾರ ಮತ್ತು ಸಾಧನೆಯ ಮೇಲೆ ಕೇಂದ್ರಿತವಾಗಿರುತ್ತದೆ.

**ಸಿದ್ಧಗೊಳಿಸುವಿಕೆ ತರಬೇತಿಯ ಹೆಚ್ಚುವರಿ ಗುಣಲಕ್ಷಣಗಳು**

**ಕೇಂದ್ರಬಿಂದು**

- ನಿರ್ದಿಷ್ಟ ಕೌಶಲ್ಯಗಳು ಮತ್ತು ಕಾರ್ಯರೀತಿಗಳ ಅಭಿವೃದ್ಧಿಯನ್ನು ಬೆಂಬಲಿಸುತ್ತದೆ; ಇದು ಸಾಧನೆ ಆಧಾರಿತ ಫಲಿತಾಂಶದ (ಗಳ) ಮೇಲೆ ಗಮನ ಕೇಂದ್ರೀಕರಿಸುತ್ತದೆ.

- ಉದ್ದೇಶಿಸಲಾಗುವ ನಿರ್ದಿಷ್ಟ ಕೌಶಲ್ಯಗಳಿಗೆ ಸಂಬಂಧಿಸಿದ ಸೈದ್ಧಾಂತಿಕ ಅಡಿಪಾಯಗಳನ್ನು ಒದಗಿಸುವಂತೆ ತರಬೇತಿ ಪಡೆವಾತರ ವಿಶಾಲ ವೃತ್ತಿಪರ ಬೆಳವಣಿಗೆಯ ಯೋಜನೆಯಲ್ಲಿ ಅಂತರ್ಗತವಾಗಿರಬೇಕು.

**ಸಂಬಂಧಗಳು**

- ನಂಬಿಕೆ ಮತ್ತು ಗೌರವವನ್ನು ಕಲ್ಪಿಸುವ ಅಂತರಕ್ರಿಯೆಗಳನ್ನು ಬೇಡುತ್ತದೆ.
- ಒಬ್ಬ ವ್ಯಕ್ತಿಯು ತರಪೇತುಗಾರನನ್ನು ಆಯ್ಕೆಮಾಡಿಕೊಳ್ಳಬಹುದು, ಅಥವಾ ಒಬ್ಬ ತರಪೇತುಗಾರನಿಗೆ ಗೊತ್ತುಮಾಡಲ್ಪಡಬಹುದು, ಅಥವಾ ತರಪೇತುಗಾರ ಒಬ್ಬ ವ್ಯಕ್ತಿ ಅಥವಾ ಗುಂಪಿಗೆ ಗೊತ್ತುಮಾಡಲ್ಪಡಬಹುದು.
- ಮೇಲ್ವಿಚಾರಣೆ ಪ್ರಕ್ರಿಯೆಗಳಿಂದ ಪ್ರತ್ಯೇಕಿಸಬೇಕು; ಆದಾಗ್ಯೂ, ಅದರ ಫಲಿತಾಂಶಗಳು ಮತ್ತು ತೀರ್ಮಾನಗಳು ಕೆಲಸದ ಕಾರ್ಯಕ್ಷಮತೆಯ ಮೌಲ್ಯಮಾಪನಕ್ಕೆ ಕೊಡಮಾಡಬಹುದು. ಇಂತಹ ಸಂದರ್ಭಗಳಲ್ಲಿ, ಈ ಸಾಧ್ಯತೆಯನ್ನು ಸಿದ್ಧಗೊಳಿಸುವಿಕೆಯ ತರಬೇತಿ ಪಡೆವಾತರ ಗಮನಕ್ಕೆ ತರಬೇಕು.

**ಪ್ರಕ್ರಿಯೆ**

- ಮಾರ್ಗಸೂಚಿಗಳು ಮತ್ತು ಗುರಿಗಳನ್ನು ನಿಗದಿಪಡಿಸುವುದಕ್ಕಾಗಿ ತರಪೇತುಗಾರ ಮತ್ತು ವ್ಯಕ್ತಿಯ ನಡುವೆ ಸಹಯೋಗಿ ಒಪ್ಪಂದದೊಂದಿಗೆ ಆರಂಭವಾಗುತ್ತದೆ.
- ಪ್ರಶ್ನಿಸುವುದು, ಆಲಿಸುವುದು, ಅವಲೋಕನ, ಪರ್ಯಾಲೋಚನೆ, ಪ್ರತಿಕ್ರಿಯೆ, ಹುರಿದುಂಬಿಸುವುದು, ಮಾದರೀಕರಣ, ಮತ್ತು ಅಭ್ಯಾಸದಂತಹ ವಿವಿಧ ಸಂಯೋಜನೆಗಳನ್ನು ಒಳಗೊಂಡಿದೆ.
- ಯೋಜಿತ ಹಾಗೂ ನೇರವಾಗಿ ಸಂಧಿಸುವ ಮೂಲಕ ಸಂಭವಿಸಬಹುದು.
- ನಿರ್ದಿಷ್ಟ ಗುರಿಯನ್ನು ಸಾಧಿಸಿದಾಗ ಕೊನೆಗೊಳ್ಳುತ್ತದೆ.

**ಅವಧಿ**

- ಗುರಿಯ ಯಶಸ್ವಿ ಸಾಧನೆಯನ್ನು ಅವಲಂಬಿಸಿ ಒಂದು ಸಲ ಅಥವಾ ಸರಣಿಗಳಲ್ಲಿ ಸಂಭವಿಸಬಹುದು.

**ತಲುಪಿಸುವ ವಿಧ**

- ಮುಖಾಮುಖಿ ಅಥವಾ ದೂರಶಿಕ್ಷಣ, ತಂತ್ರಜ್ಞಾನ ಆಧಾರಿತ, ಅಥವಾ ಮಿಶ್ರ ವಿಧಾನಗಳ ಮೂಲಕ ಒದಗಿಸಲಾಗಬಹುದು.

*********

**ಸಮಾಲೋಚನೆ** ಎಂದರೆ ನಿರ್ದಿಷ್ಟ ಪರಿಣತಿ ಮತ್ತು ವಯಸ್ಕ ಕಲಿಕಾ ಜ್ಞಾನ ಮತ್ತು ಕೌಶಲ್ಯಗಳನ್ನು ಹೊಂದಿರುವ ಬಾಹ್ಯ ಸಮಾಲೋಚಕ ಮತ್ತು ಒಂದು ಕಾರ್ಯಕ್ರಮ ಅಥವಾ ಸಂಸ್ಥೆಯ ವ್ಯಕ್ತಿ ಅಥವಾ ಗುಂಪಿನ ನಡುವೆ ನಡೆಯುವ ಸಹಯೋಗಿಯ, ಸಮಸ್ಯಾ ಪರಿಹಾರ ಪ್ರಕ್ರಿಯೆಯಾಗಿದೆ. ಸಮಾಲೋಚನೆಯು ಒಂದು ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದಂತೆ ಮೌಲ್ಯಮಾಪನ ಮತ್ತು ಪರಿಹಾರಕ್ಕೆ ಅನುವು ಮಾಡಿಕೊಡುತ್ತದೆ. ಅದು ಒಂದು ಕಾರ್ಯಕ್ರಮ/

ಸಂಸ್ಥೆ/ ಸಿಬ್ಬಂದಿ, ಅಥವಾ ಮಗು/ ಕುಟುಂಬ ಸಂಬಂಧಿತ ವಿಚಾರವಾಗಿರಬಹುದು ಅಥವಾ ಒಂದು ನಿರ್ದಿಷ್ಟ ವಿಷಯವನ್ನು ಉದ್ದೇಶಿಸಬಹುದು.

.

**ಸಮಾಲೋಚನೆಯ ಹೆಚ್ಚುವರಿ ಗುಣಲಕ್ಷಣಗಳು**

**ಕೇಂದ್ರಬಿಂದು**

- ನಿರ್ದಿಷ್ಟ ಕಾಳಜಿ ಅಥವಾ ಕಾಳಜಿಗಳ ಸಮುಚ್ಛಯದ ಪರಿಹಾರ.
- ಸಮಾಲೋಚನೆಯ ವೇಳೆ ಅಥವಾ ಸಮಾಲೋಚನೆಯ ಪರಿಣಾಮವಾಗಿ ಬಳಸಿದ ಪ್ರಕ್ರಿಯೆಯನ್ನು ತರಬೇತಿ ಪಡೆವಾತರರು ನಿರಂತರವಾಗಿ ಬಳಸಲು ಅನುವು ಮಾಡಿಕೊಡುವಂತಹ ಸಾಮರ್ಥ್ಯ ವರ್ಧಿಸುವ ವಿಧಾನ.

**ಸಂಬಂಧಗಳು**

- ಸಮಾಲೋಚಕ ಮತ್ತು ಅವರು ಯಾರಿಗೆ ಶಿಫಾರಸ್ಸುಗಳನ್ನು ನೀಡುತ್ತಾರೋ ಅವರ ನಡುವೆ ಒಂದು ಸಹಯೋಗದ ಸಂಬಂಧವನ್ನು ಬೇಡುತ್ತದೆ.
- ಸಮಾಲೋಚಕರನ್ನು ಕಾರ್ಯಸ್ಥಳದ ಆಡಳಿತಾತ್ಮಕ ನಾಯಕತ್ವವು ನೇಮಿಸಿಕೊಳ್ಳಬಹುದು. ಕೆಲವೊಂದು ಸಂದರ್ಭಗಳಲ್ಲಿ ಸಮಾಲೋಚನೆಯನ್ನು ನಿಯಂತ್ರಕ ಅಥವಾ ಅನುದಾನ ಒದಗಿಸುವ ಸೇವಾಸಂಸ್ಥೆ ಅಥವಾ ಸಂಸ್ಥೆಯಿಂದ ವ್ಯವಸ್ಥೆ ಮಾಡಲಾಗುವುದು ಅಥವಾ ನಿರ್ದೇಶಿಸಲಾಗುವುದು.

**ಪ್ರಕ್ರಿಯೆ**

- ಗುರಿಗಳ ಜಂಟಿ ಬೆಳವಣಿಗೆಯೊಂದಿಗೆ ಪ್ರಾರಂಭವಾಗುತ್ತದೆ.
- ಗುರಿ ಸಂಬಂಧಿತ ಪರಿಹಾರಗಳನ್ನು ರೂಪಿಸುವುದನ್ನು ಹಾಗೂ ಅವುಗಳನ್ನು ಸಾಧಿಸಲು ಶಿಫಾರಸ್ಸು ಮಾಡಲಾದ ಅನುಷ್ಠಾನದ ಕಾರ್ಯತಂತ್ರಗಳನ್ನು ಬೆಂಬಲಿಸುತ್ತದೆ. ಶಿಫಾರಸ್ಸುಗಳು ಸಂಬಂಧ ಆಧಾರಿತ ಇತರ TA ವಿಧಾನಗಳ ಒದಗಣೆಯನ್ನು ಒಳಗೊಂಡಿರಬಹುದು.
- ಯೋಜಿತ ಹಾಗೂ ನೇರವಾಗಿ ಸಂಧಿಸುವ ಮೂಲಕ ಸಂಭವಿಸಬಹುದು.
- ಸಾರಾಂಶ ಮಾಡುವ ಪ್ರಕ್ರಿಯೆಯೊಂದಿಗೆ ಮತ್ತು ನೀಡಲಾದ ಸಮಾಲೋಚನೆಯ ಪರಿಣಾಮಕಾರಿತ್ವದ ಮೌಲ್ಯಮಾಪನದೊಂದಿಗೆ ಕೊನೆಗೊಳ್ಳುತ್ತದೆ.

**ಅವಧಿ**

- ಸಾಮಾನ್ಯವಾಗಿ ಅಲ್ಪಾವಧಿ. ವ್ಯಕ್ತಿಗಳು, ಕಾರ್ಯಕ್ರಮಗಳು, ಅಥವಾ ಸಂಸ್ಥೆಗಳು ಕಾಲಾಂತರದಲ್ಲಿ, ಬಹುವಾದ, ಅನೇಕವೇಳೆ ಅಂತರಸಂಬಂಧಿತ ಕಾಳಜಿಗಳನ್ನು ಉದ್ದೇಶಿಸಲು ನೆರವಾಗಲೆಂದು ಸಮಾಲೋಚಕರನ್ನು ಬಳಸಿಕೊಂಡರೆ ಅವರೊಂದಿಗೆ ದೀರ್ಘಕಾಲೀನ ಸಂಬಂಧಗಳು ರೂಪುಗೊಳ್ಳಬಹುದು. ಉದಾಹರಣೆಗೆ, ಕಾರ್ಯಕ್ರಮದ ಒಟ್ಟಾರೆ ಗುಣಮಟ್ಟ ಸುಧಾರಣೆ ಪ್ರಕ್ರಿಯೆಗಳಲ್ಲಿ ಸಮಾಲೋಚಕರು ಮಾರ್ಗದರ್ಶನ ಸಹಾಯ ನೀಡುವುದರಿಂದ ಅವರೊಂದಿಗೆ ದೀರ್ಘಕಾಲೀನ ಸಂಬಂಧಗಳು ಬೆಳೆಯಬಹುದು.

**ತಲುಪಿಸುವ ವಿಧ**

- ಮುಖಾಮುಖಿ (ನೇರವಾಗಿ ಅಥವಾ ಪರೋಕ್ಷವಾಗಿ) ಅಥವಾ ದೂರಶಿಕ್ಷಣ, ತಂತ್ರಜ್ಞಾನ ಆಧರಿತ, ಅಥವಾ ಮಿಶ್ರ ವಿಧಾನಗಳ ಮೂಲಕ ಒದಗಿಸಲಾಗಬಹುದು.

*****

**ವೃತ್ತಿಪರ ಬೆಳವಣಿಗೆಗೆ ಸಲಹೆ ನೀಡುವುದು** (ಕೆಲವೊಮ್ಮೆ ವೃತ್ತಿ ಅಥವಾ PD ಗೆ ಸಂಬಂಧಿಸಿದಂತೆ ಸಲಹೆ ನೀಡುವುದು ಎಂದು ಕರೆಯಲಾಗುತ್ತದೆ) ಎರಡು ವ್ಯಕ್ತಿಗಳ ನಡುವಿನ ಒಂದು ಪ್ರಕ್ರಿಯೆಯಾಗಿದ್ದು ಆ ಮೂಲಕ ಸಲಹೆಗಾರರು ವ್ಯಕ್ತಿಯೊಬ್ಬರಿಗೆ ವೃತ್ತಿಪರ ಬೆಳವಣಿಗೆ, ವೃತ್ತಿ ಅವಕಾಶಗಳು, ಮತ್ತು ಅಗತ್ಯವಿರುವ ಅರ್ಹತೆಯನ್ನು ಪಡೆಯಲು ಅಥವಾ ಪೂರೈಸಲು ಇರುವ ಪಥಗಳ ಕುರಿತು ಮಾಹಿತಿ, ಮಾರ್ಗದರ್ಶನ, ಮತ್ತು ಸಲಹೆ ನೀಡುವುದಾಗಿದೆ.

**PD ಗೆ ಸಲಹೆ ನೀಡುವುದರ ಹೆಚ್ಚುವರಿ ಗುಣಲಕ್ಷಣಗಳು**

**ಕೇಂದ್ರಬಿಂದು**

- ತಮ್ಮ ವೃತ್ತಿಪರ ಬೆಳವಣಿಗೆ ಮತ್ತು ಪ್ರಗತಿಯ ಮುಂದುವರಿಕೆಯನ್ನು ಬಯಸುವ ವ್ಯಕ್ತಿಗಳಿಗೆ ಬೆಂಬಲ ನೀಡುತ್ತದೆ.

**ಸಂಬಂಧಗಳು**

- ನಂಬಿಕೆಯ ಮತ್ತು ಗೌರವಯುತ ಸಂಬಂಧವನ್ನು ಸ್ಥಾಪಿಸುವುದನ್ನು ಮತ್ತು ಕಾಪಾಡುವುದನ್ನು ಬೇಡುತ್ತದೆ.
- ಸಲಹೆಗಾರರ ಬೆಂಬಲವನ್ನು ಓರ್ವ ವ್ಯಕ್ತಿಯು ಪಡೆದುಕೊಳ್ಳಬಹುದು ಅಥವಾ ಸಲಹೆಗಾರರು ವ್ಯವಸ್ಥೆ, ಕಾರ್ಯಕ್ರಮ, ಅಥವಾ ಮೇಲ್ವಿಚಾರಕರಿಂದ ಗೊತ್ತುಮಾಡಲ್ಪಡ ಬಹುದು.
- ಮೇಲ್ವಿಚಾರಣೆಯ ಪ್ರಕ್ರಿಯೆಗಳು ಒಂದು ನಿರಂತರ ಪ್ರಕ್ರಿಯೆಯಾಗಿ ಮತ್ತು/ಅಥವಾ ಉದ್ಯೋಗದ ಕಾರ್ಯಕ್ಷಮತೆಯ ಮೌಲ್ಯಮಾಪನಗಳ ಅಂಗವಾಗಿ ವೃತ್ತಿಪರ ಬೆಳವಣಿಗೆಯ ಅಗತ್ಯತೆಗಳು, ಅವಶ್ಯಕತೆಗಳು, ಮತ್ತು ಅವಕಾಶಗಳ ಕುರಿತು ಸಲಹೆ ನೀಡುವುದನ್ನು ಒಳಗೊಂಡಿರಬಹುದು.

**ಪ್ರಕ್ರಿಯೆ**

- ವೃತ್ತಿ ಅಥವಾ PD ಯ ಗುರಿಗಳನ್ನು ನಿರ್ಧರಿಸುವುದರೊಂದಿಗೆ ಪ್ರಾರಂಭವಾಗುತ್ತದೆ.
- ಸಂಪನ್ಮೂಲಗಳು (ಹಣಕಾಸು, ಶೈಕ್ಷಣಿಕ, ಮತ್ತು ವೈಯಕ್ತಿಕ) ಮತ್ತು ವ್ಯವಸ್ಥೆಗಳನ್ನು ಕುಶಲವಾಗಿ ಬಳಸುವುದನ್ನು ಒಳಗೊಂಡಿದೆ. ಪ್ರಸ್ತುತ ಶೈಕ್ಷಣಿಕ ಸಾಧನೆಯ ಮೌಲ್ಯಮಾಪನ ಮತ್ತು ವ್ಯಕ್ತಿಯೊಬ್ಬರ ವೃತ್ತಿಪರ ಬೆಳವಣಿಗೆ ಯೋಜನೆಯ ಅಭಿವೃದ್ಧಿಯನ್ನು ಒಳಗೊಂಡಿರಬಹುದಾಗಿದ್ದು ಅದು ವ್ಯಕ್ತಿಯ ವೃತ್ತಿ ಗುರಿಗಳನ್ನು ಸಾಧಿಸಿಕೊಳ್ಳುವ ಸಲುವಾಗಿ ಈ ಹಿಂದೆ ಪಡೆದ ಮತ್ತು ಸಂಭಾವ್ಯ PD ಯ ಅವಕಾಶಗಳನ್ನು ಸಂಬಂಧಿಸಿಕೊಳ್ಳಲಾಗುವಂತೆ ತರಬೇತಿ ಪಡೆವಾತರರಿಗೆ ನೆರವನ್ನು ಒದಗಿಸುತ್ತದೆ.
- ವೃತ್ತಿ ಅಥವಾ ಗುರುತಿಸಿದ ಇತರ ಗುರಿಗಳನ್ನು ಸಾಧಿಸಿದಾಗ ಇದು ಪರಸ್ಪರ ಒಪ್ಪಿಗೆಯ ಮೂಲಕ ಕೊನೆಗೊಳ್ಳುತ್ತದೆ, ಅಥವಾ ವೃತ್ತಿ ಜೀವನದ ಉದ್ದಕ್ಕೂ ಮುಂದುವರಿಯಬಹುದು.

**ಅವಧಿ**

- ಅಗತ್ಯತೆಗಳು, ಪ್ರತಿಕ್ರಿಯೆ, ಮತ್ತು ಲಭ್ಯ ಸಂಪನ್ಮೂಗಳನ್ನು ಅವಲಂಬಿಸಿ ನಿರಂತರವಾಗಿ ಮುಂದುವರಿಯುವ ಅಥವಾ ಸೀಮಿತ ಅವಧಿಯ ಪ್ರಕ್ರಿಯೆಯಾಗಿರಬಹುದು.

**ತಲುಪಿಸುವ ವಿಧ**

- ಮುಖಾಮುಖಿ (ನೇರವಾಗಿ ಅಥವಾ ಪರೋಕ್ಷವಾಗಿ)ಅಥವಾ ದೂರಶಿಕ್ಷಣ, ತಂತ್ರಜ್ಞಾನ ಆಧಾರಿತ, ಅಥವಾ ಮಿಶ್ರ ವಿಧಾನಗಳ ಮೂಲಕ ಒದಗಿಸಲಾಗಬಹುದು.

*********

**ಸಹೋದ್ಯೋಗಿಗಳ ನಡುವೆ ಪರಸ್ಪರ ತಾಂತ್ರಿಕ ನೆರವು (TA)** ಸಂಬಂಧ ಆಧರಿತ ಕಲಿಕೆಯ ಬೆಳವಣಿಗೆಯನ್ನು ಹಾಗೂ ಸಾಮಾನ್ಯವಾಗಿ ಒಂದೇ ರೀತಿಯ ಪಾತ್ರಗಳನ್ನು ವಹಿಸಿ ಕಾರ್ಯನಿರ್ವಹಿಸುವ ಸಹೋದ್ಯೋಗಿಗಳ ನಡುವೆ ಬೆಂಬಲಿಸುವ ಸಮುದಾಯಗಳನ್ನು ಪೋಷಿಸುತ್ತದೆ. ಸಹೋದ್ಯೋಗಿಗಳ ನಡುವೆ ಪರಸ್ಪರ ತಾಂತ್ರಿಕ ನೆರವು ಈ ಕ್ಷೇತ್ರದಲ್ಲಿ ಗಮನಾರ್ಹವಾದ ಪರಿಣಿತರ ಜ್ಞಾನ ಆಧಾರ ಇದೆ ಹಾಗೂ ವಾಸ್ತವದಲ್ಲಿ ಸವಾಲುಗಳನ್ನು ಎದುರಿಸಿ ಬಗೆಹರಿಸಿರುವ ಸಹೋದ್ಯೋಗಿಗಳು ತಮ್ಮ ಸಹೋದ್ಯೋಗಿಗಳೊಂದಿಗೆ ಹಂಚಿಕೊಳ್ಳಬಹುದಾದ ಸಾಧನಗಳು ಮತ್ತು ಕಾರ್ಯತಂತ್ರಗಳನ್ನು ಅಭಿವೃದ್ಧಿಪಡಿಸಿದ್ದಾರೆ ಎಂಬ ಪ್ರಮೇಯದ ಮೇಲೆ ಆಧಾರಿತವಾಗಿದೆ.

**ಸಹೋದ್ಯೋಗಿಗಳ ನಡುವೆ ಪರಸ್ಪರ ತಾಂತ್ರಿಕ ನೆರವಿನ ಹೆಚ್ಚುವರಿ ಗುಣಲಕ್ಷಣಗಳು**

**ಕೇಂದ್ರಬಿಂದು**

- ಆಸಕ್ತ ಸಹೋದ್ಯೋಗಿಗಳ ನಡುವೆ ಮತ್ತು ಅವರಲ್ಲಿಯೇ ಮಾಹಿತಿ ಹಂಚಿಕೆ ಮತ್ತು ಬೆಂಬಲವನ್ನು ಹೆಚ್ಚಿಸುವುದು ಮತ್ತು ಉತ್ತೇಜಿಸುವುದು ಹಾಗೂ ವೃತ್ತಿಪರ ಬೆಳವಣಿಗೆಯಲ್ಲಿ ತೊಡಗಿಸಿಕೊಂಡಿರುವ ವ್ಯಕ್ತಿಗಳ ನಡುವೆ ಸಂಬಂಧಗಳನ್ನು ರೂಪಿಸುವುದು.
- ಇಬ್ಬರು ವ್ಯಕ್ತಿಗಳ ನಡುವೆ ಸಹೋದ್ಯೋಗಿಗಳ ನಡುವಿನ ಪರಸ್ಪರ ತಾಂತ್ರಿಕ ನೆರವು ಸಂಭವಿಸಿದಾಗ ಅದನ್ನು ''ಸಮಾನಸ್ಥ ಕಲಿಕೆ" ಎಂದು ಸಾಮಾನ್ಯವಾಗಿ ಕರೆಯಲಾಗುತ್ತದೆ. ಸಹೋದ್ಯೋಗಿಗಳ ನಡುವೆ ನಿಯತವಾಗಿ ಮತ್ತು ವ್ಯವಸ್ಥಿತ ಗುಂಪಿನಲ್ಲಿ ನಡೆಯುವ TA ಅನ್ನು ''ವೃತ್ತಿ ಸಂಬಂಧಿ ಸಮುದಾಯಗಳು" ಅಥವಾ "ವೃತ್ತಿಪರ ಕಲಿಕಾ ಸಮುದಾಯಗಳು" ಎಂದು ಕರೆಯಬಹುದು.

**ಸಂಬಂಧಗಳು**

- ಸಹೋದ್ಯೋಗಿಗಳ ನಡುವೆ ಮತ್ತು ಅವರಲ್ಲಿ ಗೌರವಯುತ ಮತ್ತು ನಂಬಿಕೆಯ ಸಂಬಂಧಗಳನ್ನು ಬೇಡುತ್ತದೆ.
- ಇಬ್ಬರ ನಡುವೆ, ಒಬ್ಬರು ಅನೇಕರೊಂದಿಗೆ, ಅಥವಾ ಗುಂಪು ಗುಂಪಿನ ನಡುವಿನ ಅಂತರಕ್ರಿಯೆಗಳಂತಹ ಸ್ವರೂಪಗಳ ಸಂಯೋಜನೆಯನ್ನು ಬಳಸಬಹುದು.
- ಸಹೋದ್ಯೋಗಿಗಳ ನಡುವಿನ ಪರಸ್ಪರ ತಾಂತ್ರಿಕ ನೆರವಿನ ಒಂದು ಸಾರಭೂತವಾದ ಗುಣಲಕ್ಷಣವೇನೆಂದರೆ, ಇಲ್ಲಿ ಪಾಲ್ಗೊಳ್ಳುವವರು ಸಮಾನ ಸ್ಥಾನದಲ್ಲಿರುವವರಾಗಿರುತ್ತಾರೆ; ಮೇಲ್ವಿಚಾರಕರನ್ನು ಮಾಹಿತಿ, ಸಂಪನ್ಮೂಲಗಳು, ಅಥವಾ ಇತರ ನೆರವನ್ನು ಒದಗಿಸಲು

ಕರೆಯಬಹುದಾದರೂ ಅವರು ಅವರ ನೌಕರರೊಂದಿಗೆ ಸಹೋದ್ಯೋಗಿಗಳ ನಡುವಿನ ಪರಸ್ಪರ ತಾಂತ್ರಿಕ ನೆರವಿನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದಿಲ್ಲ.

**ಪ್ರಕ್ರಿಯೆ**

- ಸಮಾನ ಆಸಕ್ತಿ, ಸವಾಲು, ಅಥವಾ ಗುರಿಗೆ ಸಂಬಂಧಿಸಿದಂತೆ ಸಹೋದ್ಯೋಗಿಗಳು ಒಟ್ಟಿಗೆ ಸೇರುತ್ತಾರೆ. ಸಹೋದ್ಯೋಗಿಗಳ ನಡುವಿನ ಪರಸ್ಪರ ತಾಂತ್ರಿಕ ನೆರವಿನ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿರುವವರು ಕ್ಷೇತ್ರದ ಸವಾಲುಗಳು ಮತ್ತು ವಾಸ್ತವಿಕತೆಗಳ ಬಗ್ಗೆ ಒಂದು ಸಾಮಾನ್ಯ ಅರಿವಿನೊಂದಿಗೆ ತಮ್ಮ ಕೆಲಸವನ್ನು ಪ್ರಾರಂಭಿಸುತ್ತಾರೆ. ಅವರು ಹಂಚಿಕೊಳ್ಳಲು ಒಂದೇ ರೀತಿಯದ ಅನುಭವಗಳನ್ನು ಬಳಸುತ್ತಾರೆ ಮತ್ತು ''ಒಂದೇ ತೆರನಾದ ಭಾಷೆಯಲ್ಲಿ ಮಾತನಾಡುತ್ತಾರೆ."
- ಪ್ರತಿ ಸಹಭಾಗಿಯು, ಎಲ್ಲರಿಗೆ ಅವರ ಸಾಮರ್ಥ್ಯವನ್ನು ಹೆಚ್ಚಿಸುವುದನ್ನು ಬೆಂಬಲಿಸುವಂತಹ ಅನನ್ಯ ಸಾಮರ್ಥ್ಯಗಳು, ಜ್ಞಾನ, ದೃಷ್ಟಿಕೋನಗಳು, ಮತ್ತು ಕಾರ್ಯತಂತ್ರಗಳನ್ನು ಒದಗಿಸುತ್ತಾರೆ.

**ಅವಧಿ**

- ಒಂದು ನಿರ್ದಿಷ್ಟ ವಿಚಾರವನ್ನು ಉದ್ದೇಶಿಸುವಂತಹ ಒಂದು ಸಲದ ಸಮಾನಸ್ಥ ಕಲಿಕೆಯಾಗಿರಬಹುದಾದರೂ ಸಾಮಾನ್ಯವಾಗಿ ನಿರಂತರ ಪರ್ಯಾಲೋಚನೆ, ಬೆಂಬಲ, ಮತ್ತು ಕಾಲಾಂತರವೂ ಉಳಿಯುವ ಸಮಸ್ಯಾ ಪರಿಹಾರಕ್ಕಾಗಿ ನಿರಂತರ ಸಹಭಾಗಿತ್ವವನ್ನು ಪೋಷಿಸುತ್ತದೆ.

**ತಲುಪಿಸುವ ವಿಧ**

- ಮುಖಾಮುಖಿ ಅಥವಾ ದೂರಶಿಕ್ಷಣ, ತಂತ್ರಜ್ಞಾನ ಆಧರಿತ, ಅಥವಾ ಮಿಶ್ರ ವಿಧಾನಗಳ ಮೂಲಕ ಸಂಭವಿಸಬಹುದು.

**Footnotes**

1. Details about the development process of this training and TA glossary are located in Appendix **B.**
2. "A decision-making process that integrates the best available research evidence with family and professional wisdom and values." V. Buysse, V., P. Wesley, P. Snyder, & P. Winton. 2006. "Evidence-Based Practice: What Does It Mean for the Early Childhood Field?" *Young Exceptional Children* 9 (4): 2-10.
3. NAEYC Early Childhood Program Standards and Accreditation Criteria. 2007. Standard 10.E.12. www.naeyc.org/files/academy/file/AllCriteriaDocument.pdf

# APPENDICES



# ಅನುಬಂಧ A
## ತಾಂತ್ರಿಕ ನೆರವಿನ ಕಾರ್ಯತಂತ್ರಗಳು

ಈ ಹಿಂದೆ, ಈ ದಾಖಲೆಯಲ್ಲಿ ವ್ಯಾಖ್ಯಾನಿಸಿದ ಮಾರ್ಗದರ್ಶನ, ಸಿದ್ಧಗೊಳಿಸುವುದು ಮತ್ತು ಸಮಾಲೋಚನೆಯಂತಹ TA ಕಾರ್ಯತಂತ್ರಗಳನ್ನು ಕೆಳಗೆ ಪಟ್ಟಿ ಮಾಡಲಾಗಿದೆ. ಸಾಮಾನ್ಯವಾಗಿ ಒಂದೇ ರೀತಿಯ ಕಾರ್ಯರೀತಿ ಮತ್ತು ಉದ್ದೇಶವನ್ನು ಹೊಂದಿರುವ ಈ ನಿರ್ದಿಷ್ಟ ಕಾರ್ಯತಂತ್ರಗಳ ನಡುವೆ ಹಾಗೂ ಅವುಗಳಲ್ಲಿ ಸುಲಭವಾಗಿ ಹೋಲಿಕೆ ಮಾಡಲು ಸಾಧ್ಯವಾಗುವಂತೆ ಈ ಕೋಷ್ಟಕವನ್ನು ವಿನ್ಯಾಸಗೊಳಿಸಲಾಗಿದೆ.

ಗಮನಿಸಿ: ದತ್ತ ಸಂದರ್ಭದಲ್ಲಿ ಒಂದು TA ಕಾರ್ಯತಂತ್ರವು ಸಾಮಾನ್ಯವಾಗಿ ಪ್ರಧಾನವೆನಿಸಿದರೂ, ಅನೇಕವೇಳೆ ಈ ಕಾರ್ಯತಂತ್ರಗಳು ಅತಿವ್ಯಾಪಿಸುತ್ತವೆ. ಆದಾಗ್ಯೂ, ಈ ಕೋಷ್ಟಕದಲ್ಲಿ TA ವಿಧಾನಗಳನ್ನು ಪ್ರತ್ಯೇಕವಾದ ಪ್ರಕ್ರಿಯೆಗಳಾಗಿ ನಿರೂಪಿಸಲಾಗಿದೆ.

| | ಮಾರ್ಗದರ್ಶನ | ಸಿದ್ಧಗೊಳಿಸುವಿಕೆ | ಸಮಾಲೋಚನೆ |
|---|---|---|---|
| **ವ್ಯಾಖ್ಯಾನ** | ಮಾರ್ಗದರ್ಶನ ಎಂದರೆ ಒಂದೇ ರೀತಿಯ ವೃತ್ತಿಪರ ಪಾತ್ರಗಳನ್ನು ವಹಿಸಿರುವ ಸಹೋದ್ಯೋಗಿಗಳ ನಡುವಿನ ಸಂಬಂಧ ಆಧಾರಿತ ಪ್ರಕ್ರಿಯೆಯಾಗಿದ್ದು, ಇಲ್ಲಿ ವಯಸ್ಕ ಕಲಿಕಾ ಜ್ಞಾನ ಮತ್ತು ಕೌಶಲ್ಯಗಳ ಕುರಿತು ಹೆಚ್ಚು ಅನುಭವಸ್ಥ ವ್ಯಕ್ತಿಯಾಗಿರುವ ಮಾರ್ಗದರ್ಶಕರು ಹೆಚ್ಚು ಅನುಭವವಿರದ ಸಲಹಿದಾತ ಅಥವಾ ಶಿಕ್ಷಾರ್ಥಿಗೆ ಮಾರ್ಗದರ್ಶನ ಮತ್ತು ಮಾಹಿತಿಯನ್ನು ಒದಗಿಸುತ್ತಾರೆ.<br>ಮಾರ್ಗದರ್ಶನವು ವ್ಯಕ್ತಿಯ ವೈಯಕ್ತಿಕ ಮತ್ತು ವೃತ್ತಿಪರ ಸಾಮರ್ಥ್ಯವನ್ನು ವೃದ್ಧಿಸುವ ಉದ್ದೇಶವನ್ನು ಹೊಂದಿದ್ದು, ಹೆಚ್ಚಿನ ವೃತ್ತಿಪರ ಪರಿಣಾಮಕಾರಿತ್ವದಲ್ಲಿ ಪರಿಣಮಿಸುತ್ತದೆ. | ಸಿದ್ಧಗೊಳಿಸುವಿಕೆಯ ತರಬೇತಿ ಎನ್ನುವುದು ಸಂಬಂಧ ಆಧಾರಿತ ಪ್ರಕ್ರಿಯೆಯಾಗಿದ್ದು, ಇದನ್ನು ವಿಶೇಷಜ್ಞನದ ಮತ್ತು ವಯಸ್ಕ ಕಲಿಕಾ ಜ್ಞಾನ ಮತ್ತು ಕೌಶಲ್ಯಗಳನ್ನು ಹೊಂದಿರುವ ತಜ್ಞರಿಂದ ಮುನ್ನಡೆಸಲಾಗುತ್ತದೆ ಹಾಗೂ ಸಾಮಾನ್ಯವಾಗಿ ಪಡೆವಾತರುಗಿಂತಲೂ (ಗಳಿಗಿಂತಲೂ) ಭಿನ್ನವಾದ ವೃತ್ತಿಪರ ಪಾತ್ರವನ್ನು ವಹಿಸಿ ಕಾರ್ಯನಿರ್ವಹಿಸುತ್ತಾರೆ. ನಿರ್ದಿಷ್ಟ ವೃತ್ತಿಪರ ಮನೋಪ್ರವೃತ್ತಿ, ಕೌಶಲ್ಯಗಳು, ಮತ್ತು ವರ್ತನೆಯನ್ನು ಹೊಂದುವಂತೆ ಸಮರ್ಥರನ್ನಾಗಿಸಲು ಸಿದ್ಧಗೊಳಿಸುವ ತರಬೇತಿಯನ್ನು ವಿನ್ಯಾಸಗೊಳಿಸಲಾಗುತ್ತದೆ, ಹಾಗೂ ಇದು ಒಬ್ಬ ವ್ಯಕ್ತಿ ಅಥವಾ ಗುಂಪಿನ ಗುರಿ ನಿರ್ಧಾರ ಮತ್ತು ಸಾಧನೆಯ | ಸಮಾಲೋಚನೆ ಎಂದರೆ ನಿರ್ದಿಷ್ಟ ಪರಿಣತಿ ಮತ್ತು ವಯಸ್ಕ ಕಲಿಕಾ ಜ್ಞಾನ ಮತ್ತು ಕೌಶಲ್ಯಗಳನ್ನು ಹೊಂದಿರುವ ಬಾಹ್ಯ ಸಮಾಲೋಚಕ ಮತ್ತು ಒಂದು ಕಾರ್ಯಕ್ರಮ ಅಥವಾ ಸಂಸ್ಥೆಯ ವ್ಯಕ್ತಿ ಅಥವಾ ಗುಂಪಿನ ನಡುವೆ ನಡೆಯುವ ಸಹಯೋಗಿ ಸಮಸ್ಯಾ ಪರಿಹಾರ ಪ್ರಕ್ರಿಯೆಯಾಗಿದೆ.<br>ಸಮಾಲೋಚನೆಯು ಒಂದು ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದಂತೆ ಮೌಲ್ಯಮಾಪನ ಮತ್ತು ಪರಿಹಾರಕ್ಕೆ ಅನುವು ಮಾಡಿಕೊಡುತ್ತದೆ. ಅದು ಒಂದು ಕಾರ್ಯಕ್ರಮ/ ಸಂಸ್ಥೆ, ಸಿಬ್ಬಂದಿ, ಅಥವಾ ಮಗು/ ಕುಟುಂಬ ಸಂಬಂಧಿತ ವಿಚಾರವಾಗಿರಬಹುದು ಅಥವಾ ಒಂದು ನಿರ್ದಿಷ್ಟ ವಿಷಯವನ್ನು ಉದ್ದೇಶಿಸಬಹುದು. |

| | | | |
|---|---|---|---|
| | | ಮೇಲೆ ಕೇಂದ್ರಿತವಾಗಿರುತ್ತದೆ. | |
| **ಕೇಂದ್ರಬಿಂದು** | ನಿರ್ದಿಷ್ಟ ವಿಷಯ ಅಥವಾ ತರಬೇತಿ ಶಿಕ್ಷಾರ್ಥಿಯ ಸಮಗ್ರ ವೃತ್ತಿಪರ ಬೆಳವಣಿಗೆಗೆ ಗಮನ ನೀಡುತ್ತದೆ.<br><br>ಶಿಕ್ಷಣ ಮತ್ತು/ಅಥವಾ ತರಬೇತಿಯ ಮೂಲಕ ಕಲಿತ ಸಿದ್ಧಾಂತಗಳು ಮತ್ತು ಪಡೆದ ಮಾಹಿತಿಗಳನ್ನು ಉತ್ತಮ ಕಾರ್ಯರೀತಿಗಳಾಗಿ ರೂಪಾಂತರಿಸಲು ವೃತ್ತಿಪರರಿಗೆ ಅಗತ್ಯವಿರುವ ಪರ್ಯಾಲೋಚಕ ಪ್ರಕ್ರಿಯೆಗಳನ್ನು ಬೆಂಬಲಿಸುತ್ತದೆ.<br><br>ತರಬೇತಿ ಪಡೆವಾತರರ ವಿಶಾಲವಾದ ವೃತ್ತಿಪರ ಬೆಳವಣಿಗೆಯ ಯೋಜನೆಯಲ್ಲಿ ಸೇರಿಸಬೇಕು. | ನಿರ್ದಿಷ್ಟ ಕೌಶಲ್ಯಗಳು ಮತ್ತು ಕಾರ್ಯರೀತಿಗಳ ಅಭಿವೃದ್ಧಿಯನ್ನು ಬೆಂಬಲಿಸುತ್ತದೆ; ಇದು ಸಾಧನೆ ಆಧಾರಿತ ಫಲಿತಾಂಶದ (ಗಳ) ಮೇಲೆ ಗಮನ ಕೇಂದ್ರೀಕರಿಸುತ್ತದೆ.<br><br>ಉದ್ದೇಶಿಸಲಾಗುವ ನಿರ್ದಿಷ್ಟ ಕೌಶಲ್ಯಗಳಿಗೆ ಸಂಬಂಧಿಸಿದ ಸೈದ್ಧಾಂತಿಕ ಅಡಿಪಾಯಗಳನ್ನು ಒದಗಿಸುವಂತೆ ತರಬೇತಿ ಪಡೆವಾತರ ವಿಶಾಲ ವೃತ್ತಿಪರ ಬೆಳವಣಿಗೆಯ ಯೋಜನೆಯಲ್ಲಿ ಅಂತರ್ಗತವಾಗಿರಬೇಕು. | ನಿರ್ದಿಷ್ಟ ಕಾಳಜಿ ಅಥವಾ ಕಾಳಜಿಗಳ ಸಮುಚ್ಛಯದ ಪರಿಹಾರ .<br><br>ಸಮಾಲೋಚನೆಯ ವೇಳೆ ಅಥವಾ ಸಮಾಲೋಚನೆಯ ಪರಿಣಾಮವಾಗಿ ಬಳಸಿದ ಪ್ರಕ್ರಿಯೆಯನ್ನು ತರಬೇತಿ ಪಡೆವಾತರರು ನಿರಂತರವಾಗಿ ಬಳಸಲು ಅನುವು ಮಾಡಿಕೊಡುವಂತಹ ಸಾಮರ್ಥ್ಯ ವರ್ಧಿಸುವ ವಿಧಾನ. |
| **ಸಂಬಂಧಗಳು** | ಮಾರ್ಗದರ್ಶಕ ಮತ್ತು ತರಬೇತಿ ಶಿಕ್ಷಾರ್ಥಿಯು ಸಕಾರಾತ್ಮಕ, ನಂಬಿಕೆಯ ಮತ್ತು ಗೌರವಯುತ ಸಂಬಂಧವನ್ನು ಸ್ಥಾಪಿಸುವುದನ್ನು ಹಾಗೂ ಕಾಪಾಡಿಕೊಳ್ಳುವುದನ್ನು ಒಳಗೊಂಡಿದೆ.<br><br>ಮಾರ್ಗದರ್ಶಕ ಮತ್ತು ತರಬೇತಿ ಶಿಕ್ಷಾರ್ಥಿಯ ನಡುವಿನ ಆದರ್ಶ ಸ್ವರೂಪದ ಹೊಂದಾಣಿಕೆಯು ಗೊತ್ತುಮಾಡುವುದಕ್ಕಿಂತಲೂ ಪರಸ್ಪರ ಒಪ್ಪಿಕೊಂಡ ಸಂಬಂಧವಾಗಿರುತ್ತದೆ.<br>ಒಬ್ಬ ವ್ಯಕ್ತಿಯು ಮಾರ್ಗದರ್ಶಕನ ಬೆಂಬಲ ಪಡೆಯಬಹುದು, ಒಬ್ಬ ಮಾರ್ಗದರ್ಶಕನಿಗೆ ಗೊತ್ತುಮಾಡಲ್ಪಡಬಹುದು, ಅಥವಾ ಮಾರ್ಗದರ್ಶಕನು ಒಬ್ಬ ವ್ಯಕ್ತಿಗೆ ಗೊತ್ತುಮಾಡಲ್ಪಡಬಹುದು.<br><br>ಕೆಲವು ಮೇಲ್ವಿಚಾರಕರ ಮೂಲಕ | ನಂಬಿಕೆ ಮತ್ತು ಗೌರವವನ್ನು ಕಲ್ಪಿಸುವ ಅಂತರಕ್ರಿಯೆಗಳನ್ನು ಬೇಡುತ್ತದೆ.<br><br>ಒಬ್ಬ ವ್ಯಕ್ತಿಯು ತರಪೇತುಗಾರನನ್ನು ಆಯ್ಕೆಮಾಡಿಕೊಳ್ಳಬಹುದು, ಅಥವಾ ಒಬ್ಬ ತರಪೇತುಗಾರನಿಗೆ ಗೊತ್ತುಮಾಡಲ್ಪಡಬಹುದು ಅಥವಾ ತರಪೇತುಗಾರ ಒಬ್ಬ ವ್ಯಕ್ತಿ ಅಥವಾ ಗುಂಪಿಗೆ ಗೊತ್ತುಮಾಡಲ್ಪಡಬಹುದು.<br>ಮೇಲ್ವಿಚಾರಣೆ ಪ್ರಕ್ರಿಯೆಗಳಿಂದ ಪ್ರತ್ಯೇಕಿಸಬೇಕು; ಆದಾಗ್ಯೂ, ಅದರ ಫಲಿತಾಂಶಗಳು ಮತ್ತು ತೀರ್ಮಾನಗಳು ಕೆಲಸದ ಕಾರ್ಯಕ್ಷಮತೆಯ ಮೌಲ್ಯಮಾಪನಕ್ಕೆ ಕೊಡಮಾಡಬಹುದು. ಇಂತಹ | ಸಮಾಲೋಚಕ ಮತ್ತು ಅವರು ಯಾರಿಗೆ ಶಿಫಾರಸ್ಸುಗಳನ್ನು ನೀಡುತ್ತಾರೋ ಅವರ ನಡುವೆ ಒಂದು ಸಹಯೋಗದ ಸಂಬಂಧವನ್ನು ಬೇಡುತ್ತದೆ.<br><br>ಸಮಾಲೋಚಕರನ್ನು ಕಾರ್ಯಸ್ಥಳದ ಆಡಳಿತಾತ್ಮಕ ನಾಯಕತ್ವವು ನೇಮಿಸಿಕೊಳ್ಳಬಹುದು.<br><br>ಕೆಲವೊಂದು ಸಂದರ್ಭಗಳಲ್ಲಿ ಸಮಾಲೋಚನೆಯನ್ನು ನಿಯಂತ್ರಕ ಅಥವಾ ಅನುದಾನ ಒದಗಿಸುವ ಸೇವಾಸಂಸ್ಥೆ ಅಥವಾ ಸಂಸ್ಥೆಯಿಂದ ವ್ಯವಸ್ಥೆ ಮಾಡಲಾಗುವುದು ಅಥವಾ ನಿರ್ದೇಶಿಸಲಾಗುವುದು. |

| | | | |
|---|---|---|---|
| | ಸಾಧಿಸಬಹುದಾದರೂ ಮೇಲ್ವಿಚಾರಣೆಯ ಪ್ರಕ್ರಿಯೆಗಳಿಂದ ಪ್ರತ್ಯೇಕಿಸಬೇಕು. ಕೆಲಸದ ಕಾರ್ಯಸಾಧನೆಯ ಮೌಲ್ಯಮಾಪನ ಮಾಡುವ ವಿಧಾನವಾಗಿ ಬಳಸಬಾರದು. | ಸಂದರ್ಭಗಳಲ್ಲಿ, ಈ ಸಾಧ್ಯತೆಯನ್ನು ಸಿದ್ಧಗೊಳಿಸುವಿಕೆಯ ತರಬೇತಿ ಪಡೆವಾತರ ಗಮನಕ್ಕೆ ತರಬೇಕು. | |
| **ಪ್ರಕ್ರಿಯೆ** | ಪಾತ್ರದ ಕುರಿತು ಸ್ಪಷ್ಟತೆ ಸ್ಥಾಪಿಸುವುದು ಮತ್ತು ಗುರಿಯನ್ನು ನಿರ್ಧರಿಸುವುದರೊಂದಿಗೆ ಪ್ರಾರಂಭಗೊಳ್ಳುತ್ತದೆ.<br><br>ಮಾರ್ಗದರ್ಶಿತ ಆತ್ಮಾವಲೋಕನ ಮುಂತಾದಂತಹ ವಯಸ್ಕ ಕಲಿಕಾ ತಂತ್ರಗಳನ್ನು ಸುಗಮಗೊಳಿಸುವುದನ್ನು ಒಳಗೊಂಡಿದೆ ಮತ್ತು ಅದು ತರಬೇತಿ ಶಿಕ್ಷಾರ್ಥಿಯ ವೃತ್ತಿಪರ ಕೆಲಸ ಅಥವಾ ವೈಯಕ್ತಿಕ ಮನೋಪ್ರವೃತ್ತಿಗೆ ಹೊಸ ವಿಚಾರಗಳನ್ನು ಅನ್ವಯಿಸುವುದರಲ್ಲಿ ಪರಿಣಮಿಸುತ್ತದೆ.<br><br>ತರಬೇತಿ ಶಿಕ್ಷಾರ್ಥಿಯು ಪ್ರಶ್ನೆಗಳು ಅಥವಾ ನಿರ್ದಿಷ್ಟ ಆತಂಕಗಳನ್ನು ಹೊಂದಿದ್ದಾಗ ಮಾರ್ಗದರ್ಶಕ ಮತ್ತು ತರಬೇತಿ ಶಿಕ್ಷಾರ್ಥಿಯ ನಡುವೆ ಯೋಜಿತವಲ್ಲದ ಒಡನಾಟಗಳನ್ನು ಒಳಗೊಂಡಿರಬಹುದು.<br><br>ನಿರಂತರವಾಗಿ ಮುಂದುವರಿಯುವುದು ಅಥವಾ ಪರಸ್ಪರ ಒಪ್ಪಿಗೆಯ ಮೇರೆಗೆ ಅಥವಾ ತರಬೇತಿ ಶಿಕ್ಷಾರ್ಥಿಯು ತನ್ನ ಗುರಿಗಳನ್ನು ಸಾಧಿಸಿದಾಗ ಕೊನೆಗೊಳ್ಳುತ್ತದೆ. | ಮಾರ್ಗಸೂಚಿಗಳು ಮತ್ತು ಗುರಿಗಳನ್ನು ನಿಗದಿಪಡಿಸುವುದಕ್ಕಾಗಿ ತರಪೇತುಗಾರ ಮತ್ತು ವ್ಯಕ್ತಿಯ ನಡುವೆ ಸಹಯೋಗಿ ಒಪ್ಪಂದದೊಂದಿಗೆ ಆರಂಭವಾಗುತ್ತದೆ.<br><br>ಪ್ರಶ್ನಿಸುವುದು, ಆಲಿಸುವುದು, ಅವಲೋಕನ, ಪರ್ಯಾಲೋಚನೆ, ಪ್ರತಿಕ್ರಿಯೆ, ಹುರಿದುಂಬಿಸುವುದು, ಮಾದರೀಕರಣ, ಮತ್ತು ಅಭ್ಯಾಸದಂತಹ ವಿವಿಧ ಸಂಯೋಜನೆಗಳನ್ನು ಒಳಗೊಂಡಿದೆ.<br><br>ಯೋಜಿತ ಹಾಗೂ ನೇರವಾಗಿ ಸಂಧಿಸುವ ಮೂಲಕ ಸಂಭವಿಸಬಹುದು.<br><br>ನಿರ್ದಿಷ್ಟ ಗುರಿಯನ್ನು ಸಾಧಿಸಿದಾಗ ಕೊನೆಗೊಳ್ಳುತ್ತದೆ. | ಗುರಿಗಳ ಜಂಟಿ ಬೆಳವಣಿಗೆಯೊಂದಿಗೆ ಪ್ರಾರಂಭವಾಗುತ್ತದೆ.<br><br>ಗುರಿ ಸಂಬಂಧಿತ ಪರಿಹಾರಗಳನ್ನು ರೂಪಿಸುವುದನ್ನು ಹಾಗೂ ಅವುಗಳನ್ನು ಸಾಧಿಸಲು ಶಿಫಾರಸ್ಸು ಮಾಡಲಾದ ಅನುಷ್ಠಾನದ ಕಾರ್ಯತಂತ್ರಗಳನ್ನು ಬೆಂಬಲಿಸುತ್ತದೆ. ಶಿಫಾರಸ್ಸುಗಳು ಸಂಬಂಧ ಆಧಾರಿತ ಇತರ TA ವಿಧಾನಗಳ ಒದಗಣೆಯನ್ನು ಒಳಗೊಂಡಿರಬಹುದು.<br><br>ಯೋಜಿತ ಹಾಗೂ ನೇರವಾಗಿ ಸಂಧಿಸುವ ಮೂಲಕ ಸಂಭವಿಸಬಹುದು.<br><br>ಸಾರಾಂಶ ಮಾಡುವ ಪ್ರಕ್ರಿಯೆಯೊಂದಿಗೆ ಮತ್ತು ನೀಡಲಾದ ಸಮಾಲೋಚನೆಯ ಪರಿಣಾಮಕಾರಿತ್ವದ ಮೌಲ್ಯಮಾಪನದೊಂದಿಗೆ ಕೊನೆಗೊಳ್ಳುತ್ತದೆ. |
| **ಅವಧಿ** | ನಿರಂತರ, ಪುನರುಕ್ತಿ ರೂಪದ ಪ್ರಕ್ರಿಯೆ. | ಗುರಿಯ ಯಶಸ್ವಿ ಸಾಧನೆಯನ್ನು ಅವಲಂಬಿಸಿ ಒಂದು ಸಲ ಅಥವಾ ಸರಣಿಗಳಲ್ಲಿ | ಸಾಮಾನ್ಯವಾಗಿ ಅಲ್ಪಾವಧಿ. ವ್ಯಕ್ತಿಗಳು, ಕಾರ್ಯಕ್ರಮಗಳು, ಅಥವಾ ಸಂಸ್ಥೆಗಳು ಕಾಲಾಂತರದಲ್ಲಿ, ಬಹುವಾದ, |

| | | | |
|---|---|---|---|
| | | ಸಂಭವಿಸಬಹುದು. | ಅನೇಕವೇಳೆ ಅಂತರಸಂಬಂಧಿತ ಕಾಳಜಿಗಳನ್ನು ಉದ್ದೇಶಿಸಲು ನೆರವಾಗಲೆಂದು ಸಮಾಲೋಚಕರನ್ನು ಬಳಸಿಕೊಂಡರೆ ಅವರೊಂದಿಗೆ ದೀರ್ಘಕಾಲೀನ ಸಂಬಂಧಗಳು ರೂಪುಗೊಳ್ಳಬಹುದು. ಉದಾಹರಣೆಗೆ, ಕಾರ್ಯಕ್ರಮದ ಒಟ್ಟಾರೆ ಗುಣಮಟ್ಟ ಸುಧಾರಣೆ ಪ್ರಕ್ರಿಯೆಗಳಲ್ಲಿ ಸಮಾಲೋಚಕರು ಮಾರ್ಗದರ್ಶನ ಸಹಾಯ ನೀಡುವುದರಿಂದ ಅವರೊಂದಿಗೆ ದೀರ್ಘಕಾಲೀನ ಸಂಬಂಧಗಳು ಬೆಳೆಯಬಹುದು. |
| **ತಲುಪಿಸುವ ವಿಧ** | ಮುಖಾಮುಖಿ (ನೇರವಾಗಿ ಅಥವಾ ಪರೋಕ್ಷವಾಗಿ) ಅಥವಾ ದೂರಶಿಕ್ಷಣ, ತಂತ್ರಜ್ಞಾನ ಆಧಾರಿತ, ಅಥವಾ ಮಿಶ್ರ ವಿಧಾನಗಳ ಮೂಲಕ ಒದಗಿಸಲಾಗಬಹುದು. | ಮುಖಾಮುಖಿ (ನೇರವಾಗಿ ಅಥವಾ ಪರೋಕ್ಷವಾಗಿ) ಅಥವಾ ದೂರಶಿಕ್ಷಣ, ತಂತ್ರಜ್ಞಾನ ಆಧಾರಿತ, ಅಥವಾ ಮಿಶ್ರ ವಿಧಾನಗಳ ಮೂಲಕ ಒದಗಿಸಲಾಗಬಹುದು. | ಮುಖಾಮುಖಿ (ನೇರವಾಗಿ ಅಥವಾ ಪರೋಕ್ಷವಾಗಿ) ಅಥವಾ ದೂರಶಿಕ್ಷಣ, ತಂತ್ರಜ್ಞಾನ ಆಧಾರಿತ, ಅಥವಾ ಮಿಶ್ರ ವಿಧಾನಗಳ ಮೂಲಕ ಒದಗಿಸಲಾಗಬಹುದು. |

## ಅನುಬಂಧ B
## ಯೋಜನೆಯ ಸ್ಥೂಲ ನೋಟ ಮತ್ತು ಪ್ರಕ್ರಿಯೆ

ಆರಂಭಿಕ ಬಾಲ್ಯ ಶಿಕ್ಷಣದಲ್ಲಿ ವೃತ್ತಿಪರ ಕಾರ್ಯರೀತಿ ಮತ್ತು ಕೆಲಸದ ಪರಿಸ್ಥಿತಿಗಳನ್ನು ಸುಧಾರಿಸುವುದು NAEYC (ಎನ್.ಎ.ಇ.ವೈ.ಸಿ) ಯ ಮೂರು ವಿಶಾಲವಾದ ಗುರಿಗಳಲ್ಲಿ ಒಂದಾಗಿದೆ. NAEYC ಆಡಳಿತ ಮಂಡಳಿ ಮತ್ತು ಸಿಬ್ಬಂದಿಗಳು ಈ ಗುರಿಯನ್ನು ಬೆಂಬಲಿಸುವ ಸಲುವಾಗಿ, ಆರಂಭಿಕ ಬಾಲ್ಯ ವೃತ್ತಿಪರ ಬೆಳವಣಿಗೆಯ ಗುಣಮಟ್ಟವನ್ನು ವರ್ಧಿಸುವ ವಿಧಾನಗಳನ್ನು ಮರುಪರಿಶೀಲಿಸುತ್ತಾರೆ ಮತ್ತು ಚರ್ಚಿಸುತ್ತಾರೆ. ಎರಡು ಸಾವಿರದ ಒಂಬತ್ತರಲ್ಲಿ, ವೃತ್ತಿಪರ ಬೆಳವಣಿಗೆಯ

ತರಬೇತಿಯನ್ನು ಒದಗಿಸುವವರಿಗೆಂದು ಪಾತ್ರ, ಕಾರ್ಯ, ಮತ್ತು ಮೂಲ ಸಾಮರ್ಥ್ಯಗಳಿಗೆ ಸಂಬಂಧಿಸಿದಂತೆ ಒಂದು ಭಿನ್ನ ಕ್ಷೇತ್ರೀಯ ಚೌಕಟ್ಟನ್ನು ರೂಪಿಸುವುದನ್ನು, ತಕ್ಷಣವೇ ಉದ್ದೇಶಿಸಬಹುದಾದ ಪ್ರಮುಖ ವಿಚಾರವೆಂದು ಗುರುತಿಸಲಾಯಿತು.

NACCRRA (ಎನ್.ಎ.ಸಿ.ಸಿ.ಆರ್.ಆರ್.ಎ) ಯ ಐದು ಅತ್ಯಗತ್ಯದ ಕಾರ್ಯತಂತ್ರಗಳಲ್ಲಿ ಒಂದು ಕುಟುಂಬಗಳಿಗೆ ಗುಣಮಟ್ಟದ, ಕೈಗೆಟಕುವ ಮಕ್ಕಳ ಆರೈಕೆ ಮತ್ತು ಆರಂಭಿಕ ಕಲಿಕಾ ಸೇವೆಗಳ ಲಭ್ಯಾವಕಾಶವನ್ನು ಹೆಚ್ಚಿಸುವ ನೀತಿಗಳು ಮತ್ತು ಕಾರ್ಯರೀತಿಗಳನ್ನು ಉತ್ತೇಜಿಸುವುದು ಆಗಿದೆ. NACCRRA ಯು ಆ ಉದ್ದೇಶವನ್ನು ಬೆಂಬಲಿಸುವ ಸಲುವಾಗಿ, ಜ್ಞಾನವನ್ನು ಕಾರ್ಯರೂಪಕ್ಕೆ ರೂಪಾಂತರಿಸಲು ಸಾಧ್ಯವಾಗುವಂತೆ ಸನ್ನದ್ಧ, ಅರ್ಹ ಮತ್ತು ವೈವಿಧ್ಯಮಯವಾದ ಮಕ್ಕಳ ಆರೈಕೆಯ ಕಾರ್ಯಪಡೆಯನ್ನು ಉತ್ತೇಜಿಸುವಂತಹ ವೃತ್ತಿಪರ ಬೆಳವಣಿಗೆ ನೀತಿಗಳು ಮತ್ತು ಕಾರ್ಯರೀತಿಗಳಲ್ಲಿ ರಾಷ್ಟ್ರೀಯ ನಾಯಕತ್ವವನ್ನು ಒದಗಿಸುತ್ತದೆ. ವೃತ್ತಿಪರ ಬೆಳವಣಿಗೆಗೆ, ಮುಖ್ಯವಾಗಿ ದೇಶದಾದ್ಯಂತ Child Care Resource and Referral agencies (ಚೈಲ್ಡ್ ಕೇರ್ ರಿಸೋರ್ಸ್ ಆಂಡ್ ರೆಫರಲ್ ಏಜೆನ್ಸಿಗಳು) (CCR & Rs (ಸಿ.ಸಿ.ಆರ್ & ಆರ್ ಗಳು) ಒದಗಿಸುವ ತರಬೇತಿ ಮತ್ತು ತಾಂತ್ರಿಕ ನೆರವಿಗೆ ಸಂಬಂಧಿಸಿದಂತೆ, ಸಮಂಜಸವಾದ ರಾಷ್ಟ್ರೀಯ ವ್ಯಾಖ್ಯಾನಗಳ ಅಗತ್ಯತೆಗಳನ್ನು ಒಂದು ಬುನಾದಿಯ ಗುರಿಯಾಗಿ ಗುರುತಿಸಲಾಯಿತು.

NAEYC ಯು 2009 ರಿಂದ 2010ರ ಮಧ್ಯದ ತನಕ ರಾಜ್ಯದ ನಿರ್ಣಾಯಕ ನೀತಿ ಪ್ರಶ್ನೆಗಳು, ಕಾರ್ಯತಂತ್ರಗಳು, ಸವಾಲುಗಳು, ವಿಚಾರಗಳು, ಮತ್ತು ವೃತ್ತಿಪರ ಬೆಳವಣಿಗೆಯ ವಿಧಾನಗಳು ಮತ್ತು ಅದನ್ನು ಒದಗಿಸುವವರ ಮೂಲ ಸಾಮರ್ಥ್ಯಗಳಿಗೆ ಸಂಬಂಧಿಸಿದ ಅಗತ್ಯತೆಗಳ ಕುರಿತು ಅನೇಕ ವಿಷಯ ಕೇಂದ್ರಿತ ಗುಂಪುಗಳ ಚರ್ಚಾ ಗೋಷ್ಠಿಗಳನ್ನು ಆಯೋಜಿಸಿತು ಹಾಗೂ ಮಾಹಿತಿ ಪಡೆಯುವ ಕಲಾಪಗಳನ್ನು ಸುಗಮಗೊಳಿಸಿತು. ಇಂತಹ ಅನೇಕ ಕಲಾಪಗಳನ್ನು NACCRRA (ಎನ್.ಎ.ಸಿ.ಸಿ.ಆರ್.ಆರ್.ಎ), National Professional Development Center on Inclusion (ನ್ಯಾಷನಲ್ ಪ್ರೊಫೆಷನಲ್ ಡೆವೆಲಪ್ಮೆಂಟ್ ಸೆಂಟರ್ ಆನ್ ಇಂಕ್ಲೂಷನ್), ಮತ್ತು National Louis University: McCormick Center for Early Childhood Leadership (ನ್ಯಾಷನಲ್ ಲೂಯಿ ಯುನಿವರ್ಸಿಟಿ: ಮೆಕಾರ್ಮಿಕ್ ಸೆಂಟರ್ ಫಾರ್ ಅರ್ಲಿ ಚೈಲ್ಡ್ ಹುಡ್ ಲೀಡರ್ ಶಿಪ್) ಸೇರಿದಂತೆ ರಾಷ್ಟ್ರೀಯ ಸಹಭಾಗೀದಾರರೊಂದಿಗೆ ನಡೆಸಲಾಯಿತು. ಈ ವಿಷಯ ಕೇಂದ್ರಿತ ಗುಂಪುಗಳಲ್ಲಿ ಪಾಲ್ಗೊಂಡವರ ಪೈಕಿ ನೇರ ಸೇವಾ ವೃತ್ತಿಗಾರರು (ಕೇಂದ್ರ ಮತ್ತು ಶಾಲಾ ಆಧಾರಿತ ಶಿಕ್ಷಕರು ಮತ್ತು ಕೌಟುಂಬಿಕ ಮಕ್ಕಳ ಆರೈಕೆ ಒದಗಿಸುವವರು); ವೃತ್ತಿಪರ ಬೆಳವಣಿಗೆ ಮತ್ತು ಬೆಂಬಲಗಳನ್ನು ಒದಗಿಸುವವರು (ತರಪೇತುಗಾರರು, ತಾಂತ್ರಿಕ ನೆರವು ಒದಗಿಸುವವರು, ಮಾರ್ಗದರ್ಶಕರು, ಸಿದ್ಧಗೊಳಿಸುವವರು, ಸಮಾಲೋಚಕರು, ಸಲಹೆಗಾರರು, ಉನ್ನತ ಶಿಕ್ಷಣ ಬೋಧನಾ ವೃತ್ತಿವರ್ಗದವರು, ಮತ್ತು ಇತರರು); ಕಾರ್ಯಕ್ರಮ, ಸೇವಾಸಂಸ್ಥೆ, ಮತ್ತು ವ್ಯವಸ್ಥೆಯ ಆಡಳಿತದವರು; ರಾಷ್ಟ್ರೀಯ, ರಾಜ್ಯ ಮತ್ತು ಸ್ಥಳೀಯ ನೀತಿ ನಿರೂಪಕರು; ಮತ್ತು ಆರಂಭಿಕ ಶಿಕ್ಷಣ ಕ್ಷೇತ್ರದ ಒಳಗಿನ ಮತ್ತು ಹೊರಗಿನ ಸಂಶೋಧಕರು ಸೇರಿದಂತೆ ಆರಂಭಿಕ ಬಾಲ್ಯ ಕ್ಷೇತ್ರದ ಎಲ್ಲಾ ವಲಯಗಳು (ಉದಾ: ಮಕ್ಕಳ ಆರೈಕೆ, ಪ್ರಾರಂಭಾನುಕೂಲ, ಶಾಲೆಗಳು, ಆರಂಭಿಕ ಪರಿಹಾರಿಕ ಹಸ್ತಕ್ಷೇಪಗಳು) ಮತ್ತು ಅದು ವಹಿಸುವ ವಿವಿಧ ಪಾತ್ರಗಳ ಪ್ರತಿನಿಧಿಗಳನ್ನು ಒಳಗೊಂಡಿದ್ದರು.

ಒಂದೂವರೆ ವರ್ಷಗಳ ಈ ಸಂವಾದದಲ್ಲಿ ಈ ಕೆಳಗಿನ ಮೂರು ವಿಚಾರಗಳನ್ನು ಅತ್ಯಂತ ತುರ್ತಿನ ವಿಚಾರಗಳೆಂದು ನಿರಂತರವಾಗಿ ಚರ್ಚಿಸಲಾಯಿತು:

1. ವಿಶೇಷವಾಗಿ ತಾಂತ್ರಿಕ ನೆರವಿಗೆ ಸಂಬಂಧಿಸಿದಂತೆ (ಮಾರ್ಗದರ್ಶನ, ಸಿದ್ಧಗೊಳಿಸುವ ತರಬೇತಿ, ಸಮಾಲೋಚನೆ, ಮತ್ತು ಸಲಹೆ ನೀಡುವುದು ಸೇರಿದಂತೆ), ರಾಜ್ಯ ಮತ್ತು ಸ್ಥಳೀಯ ಪ್ರಯತ್ನಗಳನ್ನು ಮತ್ತಷ್ಟು ಸ್ಪಷ್ಟಪಡಿಸಲು ಮತ್ತು ಮುಂದಕ್ಕೆ ಸಾಗುವಂತೆ ನೆರವಾಗಲು ಬೇಕಿರುವ ಸಮಂಜಸ, ರಾಷ್ಟ್ರೀಯ ವ್ಯಾಖ್ಯಾನಗಳು ಮತ್ತು ಮಾನದಂಡಗಳು.
2. ವೃತ್ತಿಪರ ಬೆಳವಣಿಗೆಯನ್ನು ಒದಗಿಸುವವರಿಗೆ ಮೂಲ ಸಾಮರ್ಥ್ಯಗಳು; ಮತ್ತು
3. ತರಬೇತಿ ಮತ್ತು ತಾಂತ್ರಿಕ ನೆರವಿನ ಮೌಲ್ಯಮಾಪನ, ಅಳತೆ, ಮತ್ತು ನಿಗಾವಣೆಯ ಅಗತ್ಯತೆ.

2010ರ ಫೆಬ್ರುವರಿ ತಿಂಗಳಿನಲ್ಲಿ ತರಬೇತಿ ಮತ್ತು ತಾಂತ್ರಿಕ ನೆರವಿಗಾಗಿ ರಾಷ್ಟ್ರೀಯ ವ್ಯಾಖ್ಯಾನಗಳನ್ನು ಅಭಿವೃದ್ಧಿಪಡಿಸುವ ಒಂದು ಜಂಟಿ ಪ್ರಯತ್ನವನ್ನು NACCRRA ಯು NAEYC ಯ ಸಹಭಾಗಿತ್ವದೊಂದಿಗೆ ನಡೆಸಿತು. ಈ ಎರಡು ಸಂಸ್ಥೆಗಳು, ಹೊಸ ಮತ್ತು ವಾಸ್ತವಿಕವಾಗಿ ಪ್ರಮುಖವೆನಿಸಿದ ಸಂಬಂಧಿತ ಸಂಶೋಧನೆ ಮಾತ್ರವಲ್ಲದೆ ಚಾಲ್ತಿಯಲ್ಲಿರುವ ಸರ್ಕಾರಿ ವ್ಯಾಖ್ಯಾನಗಳು ಮತ್ತು ಸಹಸಂಬಂಧಿತ ಗುಣಮಟ್ಟದ ಸುಧಾರಣೆ ಮತ್ತು ಆಶ್ವಾಸನೆಯ ಪ್ರಯತ್ನಗಳನ್ನೂ ಸಹ ಮರುಪರಿಶೀಲನೆ ಮಾಡುವುದರಲ್ಲಿ ತೊಡಗಿಸಿಕೊಂಡಿದ್ದವು. ಈ ಸಂಸ್ಥೆಗಳು ಕಾರ್ಯರೀತಿ ಮತ್ತು ವ್ಯವಸ್ಥೆಯ ನೀತಿಗಳನ್ನು ವ್ಯಾಖ್ಯಾನಗಳ ಅಭಿವೃದ್ಧಿಗೊಳಿಸುವಿಕೆಗೆ ತಳಪಾಯವಾಗಿ ಬಳಸಿಕೊಂಡು ರಾಜ್ಯ ವ್ಯವಸ್ಥೆಯ ನೀತಿ ಪ್ರಯತ್ನಗಳು ಇದ್ದ ಕಡೆಯಿಂದಲೇ ಈ ಕಾರ್ಯವು ಪ್ರಾರಂಭಗೊಳ್ಳಬೇಕು ಎಂದು ನಿರ್ಧರಿಸಿದವು; ಈ ಯೋಜನೆಯ ದೃಷ್ಟಿಕೋನ ಮತ್ತು ಕೇಂದ್ರಬಿಂದು ಕಾರ್ಯರೀತಿ ಮತ್ತು ರಾಜ್ಯ ನೀತಿ-ಆಧಾರಿತದ್ದಾಗಿತ್ತು. ಪ್ರಕ್ರಿಯೆಯ ಕರಡು ರಚನೆಯ ವೇಳೆ, ತರಬೇತಿ, TA, ಮತ್ತು ಶಿಕ್ಷಣದ ವ್ಯಾಖ್ಯಾನಗಳು, ಹಾಗೂ ಆರಂಭಿಕ ಶಿಕ್ಷಣ ಕ್ಷೇತ್ರ ಮತ್ತು ಕಾರ್ಯಪಡೆಯ ಬಗ್ಗೆ ಸಂದರ್ಭೋಚಿತ ಮಾಹಿತಿಯನ್ನೂ ಸಹ ಒಳಗೊಳ್ಳುವಂತೆ ವ್ಯಾಖ್ಯಾನಗಳಿಗೆ ಸಂಬಂಧಿಸಿದ ಕೆಲಸವನ್ನು ವಿಸ್ತರಿಸಲಾಯಿತು.

2010ರ ಸೆಪ್ಟೆಂಬರ್ ತಿಂಗಳಿನಲ್ಲಿ, ಆರಂಭಿಕ ಬಾಲ್ಯದ ಸಂಶೋಧಕರು, ರಾಷ್ಟ್ರೀಯ ಮತ್ತು ರಾಜ್ಯ ತಾಂತ್ರಿಕ ನೆರವಿನ ಜಾಲಗಳು, ರಾಜ್ಯ ವೃತ್ತಿಪರ ಬೆಳವಣಿಗೆ ವ್ಯವಸ್ಥೆಯ ಆಡಳಿತದವರು, ನೀತಿ ಸಮಾಲೋಚಕರು, ಮತ್ತು ಉನ್ನತ ಶಿಕ್ಷಣ ಬೋಧನಾ ವೃತ್ತಿವರ್ಗದವರನ್ನು ಪ್ರತಿನಿಧಿಸುವ ಪ್ರಮುಖ ತಜ್ಞರ ಮರುಪರಿಶೀಲನೆ ಮತ್ತು ಪ್ರತಿಕ್ರಿಯೆಗಾಗಿ ಒಂದು ಮೊದಲ ಆರಂಭಿಕ ಕರಡನ್ನು ಹಂಚಿಕೊಳ್ಳಲಾಯಿತು. ಎರಡನೆಯ ಆರಂಭಿಕ ಕರಡನ್ನು ಸಹ ಸೆಪ್ಟೆಂಬರ್ ತಿಂಗಳ ಕೊನೆಯ ಭಾಗದಲ್ಲಿ, The National Registry Alliance (ದ ನ್ಯಾಷನಲ್ ರೆಜಿಸ್ಟ್ರಿ ಅಲೈಯನ್ಸ್) ದ ರಾಷ್ಟ್ರೀಯ ಸಮ್ಮೇಳನದಲ್ಲಿ, ರಾಜ್ಯ ಮಟ್ಟದ ಪ್ರತಿಕ್ರಿಯೆ ಚರ್ಚೆಗಾಗಿ ಬಳಸಲಾಯಿತು. 2010ರ ಅಕ್ಟೋಬರ್ ನಿಂದ ಡಿಸೆಂಬರ್ ತಿಂಗಳ ತನಕ, ACCESS (ಎ.ಸಿ.ಸಿ.ಇ.ಎಸ್.ಎಸ್) ಮತ್ತು National Association for Early Childhood Teacher Educators (NAECTE) (ನ್ಯಾಷನಲ್ ಅಸೋಸಿಯೇಷನ್ ಫಾರ್ ಅರ್ಲಿ ಚೈಲ್ಡ್ ಹುಡ್ ಟೀಚರ್ ಎಜುಕೇಟರ್ಸ್) (ಎನ್.ಎ.ಇ.ಸಿ.ಟಿ.ಇ), ಮತ್ತು ಈ ಕ್ಷೇತ್ರದಲ್ಲಿ ವಿವಿಧ ಪಾತ್ರಗಳ ಕಾರ್ಯನಿರ್ವಹಣೆಯನ್ನು ಪ್ರತಿನಿಧಿಸುವ ಸಂಬಂಧಿತ ರಾಜ್ಯ ಆಸಕ್ತಿದಾರರು ಸೇರಿದಂತೆ ಹೆಚ್ಚುವರಿ ಪ್ರಮುಖ ರಾಷ್ಟ್ರೀಯ ಸಂಸ್ಥೆ ಮತ್ತು ಸಹಸಂಬಂಧಿ ಸಹಭಾಗೀದಾರರಿಂದ ಉದ್ದಿಷ್ಟದ ಪ್ರತಿಕ್ರಿಯೆಯನ್ನು ವಿನಂತಿಸಲಾಯಿತು.

NAEYC ಮತ್ತು NACCRRA ಒದಗಿಸಲಾದ ಪ್ರತಿಕ್ರಿಯೆ ಮತ್ತು ರಾಜ್ಯ ನೀತಿ ಮತ್ತು ವ್ಯವಸ್ಥೆಯ ಆಡಳಿತದವರು ವ್ಯಕ್ತಪಡಿಸಿದ ಕಾಲ-ಸೂಕ್ಷ್ಮ ಅಗತ್ಯತೆಗಳನ್ನು ಆಧರಿಸಿ, ತರಬೇತಿ ಮತ್ತು TA ವ್ಯಾಖ್ಯಾನಗಳ ಈ ಪದಕೋಶಕ್ಕೆ ಅಂತಿಮ ರೂಪವನ್ನು ಕೊಡಲೆಂದು ಮುಂದಿನ ಹೆಜ್ಜೆಯನ್ನಿಡಲು ನಿರ್ಧರಿಸಿದವು. ಈ ತರಬೇತಿ ಮತ್ತು TA ಪದಕೋಶಕ್ಕೆ ಸಹ ಸಂಪುಟವಾಗಿ, ರಾಷ್ಟ್ರೀಯ ಶಿಕ್ಷಣ ಸಂಬಂಧಿತ ವ್ಯಾಖ್ಯಾನಗಳ ಪರಿಶೋಧನೆ ಮತ್ತು ಅಭಿವೃದ್ಧಿಪಡಿಸುವುದನ್ನು NAEYC ಮತ್ತು Alliance of Early Childhood Teacher Educators (ಅಲೈಯನ್ಸ್ ಆಫ್ ಅರ್ಲಿ ಚೈಲ್ಡ್ ಹುಡ್ ಟೀಚರ್ ಎಜುಕೇಟರ್ಸ್) ಮುಂದುವರಿಸಲಿವೆ. ಅಲ್ಲದೆ, ವೃತ್ತಿಪರ ಬೆಳವಣಿಗೆಯನ್ನು ಒದಗಿಸುವ ವ್ಯಕ್ತಿಗಳ ಮೂಲ ಜ್ಞಾನ ಮತ್ತು ಸಾಮರ್ಥ್ಯಗಳು ಹಾಗೂ ಸಂಬಂಧಿತ ರಾಜ್ಯ ಪ್ರಯತ್ನಗಳನ್ನು ಬೆಂಬಲಿಸಲು ನೆರವಾಗಬಹುದಾದಂತಹ ರಾಷ್ಟ್ರೀಯ ಸಂಪನ್ಮೂಲಗಳು ಯಾವುವು ಎಂಬುದನ್ನು NAEYC, NACCRRA ಮತ್ತು Alliance of Early Childhood Teacher Educators ಸಂಸ್ಥೆಗಳಿಂದ ಶೋಧಿಸಲಾಗುವುದು.

# ಕೃತಜ್ಞತೆಗಳು

ಈ ಕೆಲಸಕ್ಕೆ ಸಂಬಂಧಿಸಿದಂತೆ ತಮ್ಮ ವಿಚಾರಗಳು, ಅಗತ್ಯತೆಗಳು, ಮತ್ತು ಭರವಸೆಗಳನ್ನು ಹಂಚಿಕೊಂಡ ನೂರಾರು ರಾಜ್ಯ ತಜ್ಞರು ಮತ್ತು ರಾಷ್ಟ್ರೀಯ ಸಹೋದ್ಯೋಗಿಗಳಿಗೆ NAEYC ಮತ್ತು NACCRRA ಕೃತಜ್ಞತೆಯನ್ನು ಸಲ್ಲಿಸುತ್ತವೆ. ನಮ್ಮ ದೇಶದ ಆರಂಭಿಕ ಶಿಕ್ಷಣದ ಕಾರ್ಯಪಡೆಗೆ ಲಭ್ಯವಿರುವ ಕಾರ್ಯರೀತಿಯದ ಹಾಗೂ ಬೆಂಬಲಗಳ ಗುಣಮಟ್ಟವನ್ನು ಸುಧಾರಿಸಲು ಮಾಡುವ ನಮ್ಮ ಎಲ್ಲಾ ಪ್ರಯತ್ನಗಳಲ್ಲಿ ಈ ಪದಕೋಶವು ನಮಗೆ ನೆರವಾಗುವುದು ಎಂದು ನಾವು ಪ್ರಾಮಾಣಿಕವಾಗಿ ನಂಬಿದ್ದೇವೆ.

ವಿಶೇಷವಾಗಿ, NAEYC ಮತ್ತು NACCRRA ರಾಜ್ಯ ನೀತಿ ನಿರೂಪಕರು ಮತ್ತು 44 ರಾಜ್ಯಗಳ ಮತ್ತು ಕೊಲಂಬಿಯಾ ಜಿಲ್ಲೆಯ PD ನಾಯಕತ್ವ ಪ್ರತಿನಿಧಿಗಳು, ಹಾಗೂ ಈ ಕೆಳಗಿನ ರಾಷ್ಟ್ರೀಯ ಸಂಸ್ಥೆಗಳು/ ಸೇವಾಸಂಸ್ಥೆಗಳಿಗೆ ಮಾಹಿತಿ ಒದಗಿಸುವ ಮತ್ತು ಪ್ರತಿಕ್ರಿಯೆ ಪ್ರಕ್ರಿಯೆಗಳಲ್ಲಿ ಪಾಲ್ಗೊಂಡಿದ್ದಕ್ಕೆ, ಧನ್ಯವಾದವನ್ನು ಸಲ್ಲಿಸುತ್ತವೆ.

- ACCESS–Associate Degree Early Childhood Teacher Educators (ಎ.ಸಿ.ಸಿ.ಇ.ಎಸ್.ಎಸ್ – ಅಸೋಸಿಯೇಟ್ ಡಿಗ್ರಿ ಅರ್ಲಿ ಚೈಲ್ಡ್ ಹುಡ್ ಟೀಚರ್ ಎಜುಕೇಟರ್ಸ್)
- Center for the Study of Child Care Employment (ಸೆಂಟರ್ ಫಾರ್ ದ ಸ್ಟಡಿ ಆಫ್ ಚೈಲ್ಡ್ ಕೇರ್ ಎಂಪ್ಲಾಯ್ಮೆಂಟ್ )
- Child Trends ((ಚೈಲ್ಡ್ ಟ್ರೆಂಡ್ಸ್)
- Division for Early Childhood of the Council for Exceptional Children (ಡಿವಿಷನ್ ಫಾರ್ ಅರ್ಲಿ ಚೈಲ್ಡ್‌ಹುಡ್ ಆಫ್ ದ ಕೌನ್ಸಿಲ್ ಫಾರ್ ಎಕ್ಸೆಪ್ಷನಲ್ ಚಿಲ್ಡ್ರನ್ )
- National Association for Family Child Care (ನ್ಯಾಷನಲ್ ಅಸೋಸಿಯೇಷನ್ ಫಾರ್ ಫ್ಯಾಮಿಲಿ ಚೈಲ್ಡ್ ಕೇರ್)
- National Association of Early Childhood Teacher Educators (ನ್ಯಾಷನಲ್ ಅಸೋಸಿಯೇಷನ್ ಆಫ್ ಅರ್ಲಿ ಚೈಲ್ಡ್ ಹುಡ್ ಟೀಚರ್ ಎಜುಕೇಟರ್ಸ್)
- National Association of Early Childhood Specialists in State Departments of Education (ನ್ಯಾಷನಲ್ ಅಸೋಸಿಯೇಷನ್ ಆಫ್ ಅರ್ಲಿ ಚೈಲ್ಡ್ ಹುಡ್ ಸ್ಪೆಷಲಿಸ್ಟ್ಸ್ ಇನ್ ಸ್ಟೇಟ್ ಡಿಪಾರ್ಟ್ಮೆಂಟ್ಸ್ ಆಫ್ ಎಜುಕೇಶನ್)
- National Center for Children in Poverty (ನ್ಯಾಷನಲ್ ಸೆಂಟರ್ ಫಾರ್ ಚಿಲ್ಡ್ರನ್ ಇನ್ ಪಾವರ್ಟಿ)
- National Child Care Information and Technical Assistance Center (ನ್ಯಾಷನಲ್ ಚೈಲ್ಡ್ ಕೇರ್ ಇನ್ಫರ್ಮೇಶನ್ ಅಂಡ್ ಟೆಕ್ನಿಕಲ್ ಅಸಿಸ್ಟೆನ್ಸ್ ಸೆಂಟರ್)
- National Louis University: McCormick Center for Early Childhood Leadership (ನ್ಯಾಷನಲ್ ಲೂಯಿ ಯೂನಿವರ್ಸಿಟಿ: ಮೆಕಾರ್ಮಿಕ್ ಸೆಂಟರ್ ಫಾರ್ ಅರ್ಲಿ ಚೈಲ್ಡ್ ಹುಡ್ ಲೀಡರ್‌ಶಿಪ್)
- National Professional Development Center on Inclusion (ನ್ಯಾಷನಲ್ ಪ್ರೊಫೆಷನಲ್ ಡೆವೆಲಪ್ಮೆಂಟ್ ಸೆಂಟರ್ ಆನ್ ಇಂಕ್ಲೂಷನ್)
- The National Registry Alliance (ದ ನ್ಯಾಷನಲ್ ರೆಜಿಸ್ಟ್ರಿ ಅಲೈಯನ್ಸ್)
- Office of Head Start (ಆಫಿಸ್ ಆಫ್ ಹೆಡ್ ಸ್ಟಾರ್ಟ್)
- Society for Research in Child Development (ಸೊಸೈಟಿ ಫಾರ್ ರೀಸರ್ಚ್ ಇನ್ ಚೈಲ್ಡ್ ಡೆವೆಲಪ್ಮೆಂಟ್)
- U.S. Department of Education (ಯು.ಎಸ್ ಡಿಪಾರ್ಟ್ಮೆಂಟ್ ಆಫ್ ಎಜುಕೇಶನ್)
- Zero to Three (ಝೀರೊ ಟು ತ್ರೀ)

ಈ ಕೆಲಸದಲ್ಲಿ ನೆರವನ್ನು ಒದಗಿಸಿದ ಹಾಗೂ ತಮ್ಮ ಪರಿಣತಿಯನ್ನು ಹಂಚಿಕೊಳ್ಳಲು ಮನಸಿದ್ದ NAEYC ಅಂಗಸಂಸ್ಥೆಗಳ ಸ್ವಯಂಸೇವಕ ಮತ್ತು ಸಿಬ್ಬಂದಿ ನಾಯಕತ್ವ ಮತ್ತು NACCRRA ರಾಜ್ಯ ಜಾಲಗಳು ಮತ್ತು ಮಕ್ಕಳ ಆರೈಕೆಯ ಸಂಪನ್ಮೂಲ ಮತ್ತು ಸಲಹಾ ಸೇವಾಸಂಸ್ಥೆಗಳ ನಾಯಕತ್ವ ಮತ್ತು ಸಿಬ್ಬಂದಿಗೆ ಹೆಚ್ಚುವರಿಯಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಈ ಯೋಜನೆಯಲ್ಲಿ NAEYC ಯ ಪಾತ್ರವನ್ನು ಬೆಂಬಲಿಸಲು ಉದಾರ ನೆರವು ನೀಡಿದ Birth to Five Policy Alliance (ಬರ್ತ್ ಟು ಫೈವ್ ಪಾಲಿಸಿ ಅಲೈಯನ್ಸ್) ಮತ್ತು McCormick Foundation (ಮೆಕಾರ್ಮಿಕ್ ಫೌಂಡೇಶನ್) ಗೆ NAEYC ಚಿರಋಣಿಯಾಗಿದೆ.